5ನೇ ಆಪರ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಕಲಬುರಗಿ

ಸಿ.ಸಿ.ಸಂಖ್ಯೆಃ 2549/2013

ದಿನಾಂಕಃ 15ನೇ ಡಿಸೆಂಬರ 2015

ಉಪಸ್ಥಿತರುಃ ಕುಮಾರಿಃ ಸೌಭಾಗ್ಯ ಭೂಸೇರ,
ಬಿ.ಎ., ಎಲ್.ಎಲ್.ಬಿ.(ಸ್ಪೇ),
5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕಲಬುರಗಿ

ಫಿರ್ಯಾದಿದಾರರುಃ
ರಾಜ್ಯದ ಪರವಾಗಿ ಗ್ರಾಮೀಣ ಪೊಲೀಸ್ ಠಾಣೆ, ಕಲಬುರಗಿ
(ಸಹಾಯಕ ಸರ್ಕಾರಿ ಅಭಿಯೋಜಕರಿಂದ)

// ವಿರುದ್ಧ //

ಆರೋಪಿಃ ಶಿವಕುಮಾರ ತಂದೆಃ ಮಾಣಿಕಪ್ಪ ವಲಿ
ವಯಃ 26 ವರ್ಷ, ಉಃ ಟಂಟಂ ನಂ.
ಕೆಎ-09-5614ನೇದ್ದರ ಚಾಲಕ ಮತ್ತು ಮಾಲಿಕ
ಸಾಃ ಯವಳವಂತಗಿ(ಬಿ), ತಾಃಜಿಃ ಗುಲಬರ್ಗಾ.

*(ಶ್ರೀ. ಸೈಯ್ಯದ ಮಸ್ತಾನ, ವಕೀಲರು.)*

| | | |
|---|---|---|
| 01. ಅಪರಾಧ ಸಂಭವಿಸಿದ ದಿನಾಂಕ | ಃ | 19-03-2013 |
| 02. ಅಪರಾಧ ವರದಿಯಾದ ದಿನಾಂಕ | ಃ | 19-03-2013 |
| 03. ಆರೋಪಿಯ ಬಂಧನ ದಿನಾಂಕ | ಃ | ---- |
| 04. ಫಿರ್ಯಾಧಿಯ ಹೆಸರು | ಃ | ಶ್ರೀ. ಅಣ್ಣೆಪ್ಪ |
| 05. ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿ. | ಃ | 10-09-2014 |

06. ಆರೋಪಗಳು : ಭಾರತ ದಂಡ ಸಂಹಿತೆ
ಕಲಂ 279 ಮತ್ತು 304(ಎ)ಮತ್ತು ಕಲಂಃ 187
ಐಎಂವಿ ಆ್ಯಕ್ಟ

07. ಸಾಕ್ಷಿ ವಿಚಾರಣೆ ಮುಗಿಸಿದ ದಿನಾಂಕ : 12-02-2015

08. ತೀರ್ಪಿನ ದಿನಾಂಕ : 15-12-2015

09. ನ್ಯಾಯಾಧೀಶರ ತೀರ್ಮಾನ : ಆರೋಪಿ ನಿರ್ದೋಷಿ

(ಸೌಭಾಗ್ಯ ಭೂಸೇರ)
*5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು*
*ಜೆ.ಎಂ.ಎಫ್.ಸಿ. ಕಲಬುರಗಿ*

ತೀರ್ಪು

1) ಕಲಬುರಗಿ ನಗರದ ಗ್ರಾಮೀಣ ಠಾಣಾಧಿಕಾರಿಯವರು ಆಪಾದಿತನ ವಿರುದ್ಧ ಭಾರತ ದಂಡ ಸಂಹಿತೆ ಕಲಂಃ 279 ಮತ್ತು 304(ಎ) ಮತ್ತು ಕಲಂಃ 187 ಐಎಂವಿ ಆ್ಯಕ್ಟ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳನ್ನು ಮಾಡಿರುತ್ತಾನೆಂದು ಪ್ರಸ್ತುತ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

2) ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ-

ದಿನಾಂಕಃ 19-03-2013 ರಂದು ರಾತ್ರಿ 09-30 ಗಂಟೆಗೆ, ಗ್ರಾಮೀಣ ಪೊಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ, ಗುಲಬರ್ಗಾ-ಹುಮನಾಬಾದ ಮುಖ್ಯ ಹೆದ್ದಾರಿ ರಸ್ತೆಯ ಅವರಾದ ಸೀಮಾಂತರದ ಆಲಗೂಡ ಕ್ರಾಸಿನ ಹತ್ತಿರ ಇರುವ ಅಳ್ಳಿ ಹಳ್ಳದ ಸೇತುವೆ ಸಮೀಪದಲ್ಲಿ, ಶ್ರೀಕಾಂತ ತಂದೆಃ ಅಣ್ಣೆಪ್ಪ ಜಮಾದಾರ ಇತನು ಹಿರೋಹೊಂಡಾ ಸ್ಲೆಂಡರ್ ಮೊಟಾರ ಸೈಕಲ್ ನಂ. ಕೆಎ-32- ಆರ್-2901 ನೇದ್ದರ ಮೇಲೆ ಬಸವಕಲ್ಯಾಣ- ಹುಲಸೂರಕ್ಕೆ ಹೋಗಿ ಮರಳಿ

ಗುಲಬರ್ಗಾಕ್ಕೆ ಬರುತ್ತಿದ್ದಾಗ, ಎದುರುಗಡೆಯಿಂದ ಆರೋಪಿತನು ತನ್ನ ಟಂಟಂ ನಂ. ಕೆಎ-09-ಎ-5614ನೇದ್ದನ್ನು ಗುಲಬರ್ಗಾ ಕಡೆಯಿಂದ ಅತೀವೇಗದಿಂದ, ಅಲಕ್ಷತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದು ಶ್ರೀಕಾಂತ ಇತನು ಬರುವ ರಸ್ತೆಯ ಸೈಡಿಗೆ ಹೋಗಿ ಮೊಟಾರ ಸೈಕಲ್‌ಗೆ ಡಿಕ್ಕಿಪಡಿಸಿ ಅಪಘಾತಪಡಿಸಿದ್ದರಿಂದ ಶ್ರೀಕಾಂತ ಇತನ ಮುಖಕ್ಕೆ, ಮೂಗಿನ ಮದ್ಯದಲ್ಲಿ, ಎರಡೂ ಕಣ್ಣುಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಆರೋಪಿತನು ಅಪಘಾತಪಡಿಸಿದ ನಂತರ ಟಂಟಂ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಅಪಘಾತದ ಬಗ್ಗೆ ಸಮೀಪದ ಪೊಲೀಸ ಠಾಣೆಗೆ ತಿಳಿಸದೇ, ಗಾಯಾಳುವಿಗೆ ಪ್ರಥಮ ಚಿಕಿತ್ಸೆ ನೀಡದೇ ಓಡಿಹೋಗಿರುತ್ತಾನೆ ನಿಶಾನೆ.ಪಿ-1 ರಂತೆ ಗ್ರಾಮೀಣ ಪೋಲಿಸ್ ಠಾಣೆಗೆ ಪಿರ್ಯಾದಿದಾರರು ಫಿರ್ಯಾದಿಯನ್ನು ಸಲ್ಲಿಸಿದ್ದು, ಗ್ರಾಮೀಣ ಪೊಲೀಸ ಠಾಣೆಯವರು ಸದರಿ ಫಿರ್ಯಾದಿಯನ್ನು ಪಡೆದು ತಮ್ಮ ಠಾಣೆ ಗುನ್ನೆ ನಂಃ144/2013 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು, ನಂತರ ಪಂಚರ ಸಮಕ್ಷಮ ಘಟನಾ ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡು ನಂತರ ತನಿಖೆಯನ್ನು ಪೂರೈಸಿ ಆರೋಪಿತನು ಭಾರತ ದಂಡ ಸಂಹಿತೆ ಕಲಂ 279 ಮತ್ತು 304(ಎ) ಮತ್ತು ಕಲಂಃ 187 ಐಎಂವಿ ಆ್ಯಕ್ಟ ರಡಿ ಶಿಕ್ಷಾರ್ಹವಾದ ಅಪರಾಧಗಳನ್ನು ಮಾಡಿರುತ್ತಾನೆಂದು ಆರೋಪಿಸಿ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ ಎಂಬುವದು ಅಭಿಯೋಜನೆಯ ಪ್ರಕರಣದ ಸಾರಾಂಶವಾಗಿದೆ.

3) ಅಪರಾಧಗಳ ಕುರಿತು ಸಂಜ್ಞೆ ತೆಗೆದುಕೊಂಡು ಆರೋಪಿತನಿಗೆ ಸಮನ್ಸ್ ಕಳುಹಿಸಲಾಗಿ, ಅವನು ಹಾಜರಾಗಿದ್ದು, ಅವನಿಗೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ.207 ರಡಿಯಲ್ಲಿ ಅಭಿಯೋಜನೆಯ ದಾಖಲೆಗಳ ನಕಲು ಪ್ರತಿಗಳನ್ನು ಒದಗಿಸಲಾಗಿದೆ. ಆಪಾದಿತನಿಗೆ ಅಪರಾಧದ ಬಗ್ಗೆ ದೋಷಾರೋಪಣೆಯನ್ನು ರಚಿಸಿ ಓದಿ ವಿವರಿಸಿ ಹೇಳಲಾಗಿ ಆಪಾದಿತನು ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕೆಂದು ಹೇಳಿದ್ದರಿಂದ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿದೆ.

4) ಉಭಯ ಪಕ್ಷಗಾರರ ಪರ ವಾದ-ವಿವಾದ ಕೇಳಿದ್ದೇನೆ. ಈ ಪ್ರಕರಣವನ್ನು ತೀರ್ಮಾನಿಸಲು ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ.

*ಅಂಶಗಳು*

1) ದಿನಾಂಕಃ 19-03-2013 ರಂದು ರಾತ್ರಿ 09-30 ಗಂಟೆಗೆ, ಗುಲಬರ್ಗಾ-ಹುಮನಾಬಾದ ಮುಖ್ಯ ಹೆದ್ದಾರಿ ರಸ್ತೆಯ ಅವರಾದ ಸೀಮಾಂತರದ ಆಲಗೂಡ ಕ್ರಾಸಿನ ಹತ್ತಿರ ಇರುವ ಅಳ್ಳಿ ಹಳ್ಳದ ಸೇತುವೆ ಸಮೀಪದಲ್ಲಿ, ಶ್ರೀಕಾಂತ ತಂದೆಃ ಅಣ್ಣೆಪ್ಪ ಜಮಾದಾರ ಇತನು ಹಿರೋಹೊಂಡಾ ಸ್ಲೆಂಡರ್ ಮೋಟಾರ ಸೈಕಲ್ ನಂ. ಕೆಎ-32-ಆರ್-2901ನೇದ್ದರ ಮೇಲೆ ಬಸವಕಲ್ಯಾಣ-ಹುಲಸೂರಕ್ಕೆ ಹೋಗಿ ಮರಳಿ ಗುಲಬರ್ಗಾಕ್ಕೆ ಬರುತ್ತಿದ್ದಾಗ, ಎದುರುಗಡೆಯಿಂದ ಆರೋಪಿ ತನ್ನ ಟಂಟಂ ನಂ. ಕೆಎ-09-ಎ-5614ನೇದ್ದನ್ನು ಗುಲಬರ್ಗಾ ಕಡೆಯಿಂದ ಅತೀವೇಗದಿಂದ, ಅಲಕ್ಷತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದು ಶ್ರೀಕಾಂತ ಇತನು ಬರುವ ರಸ್ತೆಯ ಸೈಡಿಗೆ ಹೋಗಿ ಮೋಟಾರ ಸೈಕಲ್‌ಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತಿ ಎಂದು ಭಾರತ ದಂಡ ಸಂಹಿತೆ ಕಲಂ. 279 ರಡಿ ಆರೋಪಿತನು ಶಿಕ್ಷಾರ್ಹ ಅಪರಾಧ ಎಸಗಿದ್ದಾನೆಂದು ಅಭಿಯೋಜನೆ ಪಕ್ಷದವರು ಸಂಶಯಾತೀತವಾಗಿ ಸಾಬೀತು ಪಡಿಸಿರುವರೆ?

*2)* ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿ ತನ್ನ ಟಂಟಂ ನಂ. ಕೆಎ-09-ಎ-5614 ನೇದ್ದನ್ನು ಗುಲಬರ್ಗಾ ಕಡೆಯಿಂದ ಅತೀವೇಗದಿಂದ, ಅಲಕ್ಷತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದು ಶ್ರೀಕಾಂತ ಇತನು ಬರುವ ರಸ್ತೆಯ ಸೈಡಿಗೆ ಹೋಗಿ ಮೊಟಾರ ಸೈಕಲ್‌ಗೆ ಡಿಕ್ಕಿ ಪಡಿಸಿ ಅಪಘಾತಪಡಿಸಿದ್ದರಿಂದ ಶ್ರೀಕಾಂತ ಇತನ ಮುಖಕ್ಕೆ, ಮುಗಿನ ಮದ್ಯದಲ್ಲಿ, ಎರಡೂ ಕಣ್ಣಿಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆಂದು ಭಾರತ ದಂಡ ಸಂಹಿತೆ ಕಲಂ. 304(ಎ) ರಡಿ ಆರೋಪಿತನು *ಶಿಕ್ಷಾರ್ಹ* ಅಪರಾಧ *ಎಸಗಿದ್ದಾನೆಂದು*

*ಸಂಶಯಾತೀತವಾಗಿ ಸಾಬೀತು ಪಡಿಸಿರುವರೆ?*

3) ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿಯಾದ ನೀವು ಟಂಟಂ ವಾಹನವನ್ನು ಚಲಾಯಿಸಿಕೊಂಡು ಬಂದು ಎದುರುಗಡೆಯಿಂದ ಬರುತ್ತಿದ್ದ ಮೊಟಾರ ಸೈಕಲ್‌ಗೆ ಡಿಕ್ಕಿಪಡಿಸಿ ಟಂಟಂ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಅಪಘಾತದ ಬಗ್ಗೆ ಸಮೀಪದ ಪೊಲೀಸ ಠಾಣೆಗೆ ತಿಳಿಸದೇ, ಗಾಯಾಳುವಿಗೆ ಪ್ರಥಮ ಚಿಕಿತ್ಸೆ ನೀಡದೇ ಓಡಿಹೋಗಿರುತ್ತಿ ಎಂದು ಕಲಂಃ187 ಐಎಂವಿ ಆ್ಯಕ್ಟ ರಡಿ ಆರೋಪಿತನು ಶಿಕ್ಷಾರ್ಹ ಅಪರಾಧ ಎಸಗಿದ್ದಾನೆಂದು ಸಂಶಯಾತೀತವಾಗಿ ಸಾಬೀತು ಪಡಿಸಿರುವರೆ?

*4) ಹಾಗಿದ್ದರೆ ಯಾವ ಆಜ್ಞೆ ?*

5) ಈ ಪ್ರಕರಣದಲ್ಲಿ ಅಭಿಯೋಜನೆಯವರು ಆರೋಪಿ ಮೇಲೆ ಹೊರಸಿದ ಆರೋಪವನ್ನು ರುಜುವಾತು ಪಡಿಸಲು ತಮ್ಮ ಪರವಾಗಿ ಎಂಟು ಸಾಕ್ಷಿದಾರರನ್ನು ಪ್ರಾ.ಸಾ-1 ರಿಂದ ಪ್ರಾ.ಸಾ-08 ಎಂದು ವಿಚಾರಣೆ ಮಾಡಿ ನಿಶಾನೆ ಪಿ-1 ರಿಂದ ನಿಶಾನೆ ಪಿ.-10ನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಆರೋಪಿತನು ತನ್ನ ಪರವಾಗಿ ನಿಡಿ-1 ದಾಖಲೆಯನ್ನು ನಿ ಶಾನೆಕರಿಸಿಕೊಂಡಿರುತ್ತಾನೆ. ಸಾಕ್ಷ್ಯಗಳ ವಿಚಾರಣೆ ಮುಗಿದ ನಂತರ ಆರೋಪಿತನ ವಿರುದ್ಧ ದಂಡ ಪ್ರಕ್ರಿಯಾ ಸಂಹಿತೆ ಕಲಂಃ 313ರಡಿ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿಯು ತನ್ನ ಪರವಾಗಿ ಯಾವುದೇ ಪ್ರತಿರಕ್ಷಣಾ ಸಾಕ್ಷಿಗಳನ್ನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

6) ಪ್ರಜ್ಞಾ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿ ಪರ ವಕೀಲರ ವಾದ-ವಿವಾದಗಳನ್ನು ಕೇಳಲಾಯಿತು.

7) ಈ ಮೇಲೆ ಹೇಳಿದ ಅಂಶಗಳಿಗೆ ಕೆಳಗಿನಂತೆ ಉತ್ತರಿಸಿದ್ದೇನೆ.

*ಅಂಶ ನಂ.1 ಃ ನಕಾರಾತ್ಮಕವಾಗಿ*

*ಅಂಶ ನಂ.2 ಃ ನಕಾರಾತ್ಮಕವಾಗಿ*

*ಅಂಶ ನಂ.3 ಃ ನಕಾರಾತ್ಮಕವಾಗಿ*

*ಅಂಶ ನಂ.4 ಃ ಕೊನೆಯ ಆಜ್ಞೆಯಂತೆ,*

## ಕಾರಣಗಳು

8) ಅಂಶ ನಂ.1 ರಿಂದ 3 ಗಳಿಗೆಃ

ಸದರಿ ಅಂಶಗಳಲ್ಲಿನ ಅಂತರ ಸಂಬಂಧದಿಂದಾಗಿ ಹಾಗೂ ಪುನರಾರ್ವತನೆಯನ್ನು ತಪ್ಪಿಸುವ ಉದ್ದೇಶದಿಂದ ಇವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9) ಅಭಿಯೋಜನೆಯ ಪ್ರಕರಣದ ಸಾರಾಂಶದ ಮೇರೆಗೆ, ದಿನಾಂಕಃ 19-03-2013 ರಂದು ರಾತ್ರಿ 09-30 ಗಂಟೆಗೆ, ಗುಲಬರ್ಗಾ-ಹುಮನಾಬಾದ ಮುಖ್ಯ ಹೆದ್ದಾರಿ ರಸ್ತೆಯ ಅವರಾದ ಸೀಮಾಂತರದ ಆಲಗೂಡ ಕ್ರಾಸಿನ ಹತ್ತಿರ ಇರುವ ಅಳ್ಳಿ ಹಳ್ಳದ ಸೇತುವೆ ಸಮೀಪದಲ್ಲಿ, ಶ್ರೀಕಾಂತ ತಂದೆಃ ಅಣ್ಣೆಪ್ಪ ಜಮಾದಾರ ಇತನು ಹಿರೋಹೊಂಡಾ ಸ್ಲೆಂಡರ್ ಮೊಟಾರ ಸೈಕಲ್ ನಂ. ಕೆಎ-32-ಆರ್-2901ನೇದ್ದರ ಮೇಲೆ ಬಸವಕಲ್ಯಾಣ-ಹುಲಸೂರಕ್ಕೆ ಹೋಗಿ ಮರಳಿ ಗುಲಬರ್ಗಾಕ್ಕೆ ಬರುತ್ತಿದ್ದಾಗ, ಎದುರುಗಡೆಯಿಂದ ಆರೋಪಿತನು ತನ್ನ ಟಂಟಂ ನಂ. ಕೆಎ-09-ಎ-5614 ನೇದ್ದನ್ನು ಗುಲಬರ್ಗಾ ಕಡೆಯಿಂದ ಅತೀವೇಗದಿಂದ, ಅಲಕ್ಷತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದು ಶ್ರೀಕಾಂತ ಇತನು ಬರುವ ರಸ್ತೆಯ ಸೈಡಿಗೆ ಹೋಗಿ ಮೊಟಾರ ಸೈಕಲ್‌ಗೆ ಡಿಕ್ಕಿಪಡಿಸಿ ಅಪಘಾತಪಡಿಸಿದ್ದರಿಂದ ಶ್ರೀಕಾಂತ ಇತನ ಮುಖಕ್ಕೆ, ಮೂಗಿನ ಮದ್ಯದಲ್ಲಿ, ಎರಡೂ ಕಣ್ಣಿಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಆರೋಪಿತನು ಅಪಘಾತಪಡಿಸಿದ ನಂತರ ಟಂಟಂ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಅಪಘಾತದ ಬಗ್ಗೆ ಸಮೀಪದ ಪೊಲೀಸ ಠಾಣೆಗೆ ತಿಳಿಸದೇ, ಗಾಯಾಳುವಿಗೆ ಪ್ರಥಮ ಚಿಕಿತ್ಸೆ ನೀಡದೇ ಓಡಿಹೋಗಿರುತ್ತಾನೆಂದು ಅಭಿಯೋಜನೆಯವರು ಸಾಭೀತುಪಡಿಸುವ ನಿಟ್ಟಿನಲ್ಲಿ ಪ್ರಾಸಾಃ1 ರಿಂದ 8 ರವರನ್ನು ಸಾಕ್ಷಿ ಮಾಡಿಸಿರುತ್ತಾರೆ.

10) ಸಾಕ್ಷಿದಾರರ ಪುರಾವೆಯನ್ನು ಚರ್ಚಿಸುವುದಕ್ಕಿಂತ ಪೂರ್ವ ಅಭಿಯೋಜನೆಯವರು ಸದರಿ ಅಪರಾಧಗಳನ್ನು ರುಜುವಾತುಪಡಿಸಲು ಯಾವ ಘಟಕಾಂಶಗಳ ಅವಶ್ಯಕತೆ ಇವೆ ಎಂದು ಬರೆಯುವುದು ಸೂಕ್ತ ಭಾರತೀಯ ದಂಡ ಸಂಹಿತೆ ಕಲಂ 279 ರಡಿಯಲ್ಲಿ

ಅಪರಾಧವಾಗಬೇಕಾದರೆ ಈ ಕೆಳಕಂಡ ಘಟಕಾಂಶಗಳನ್ನು ಅಭಿಯೋಜನೆಯವರು ಯುಕ್ತ ಸಂಶಯ ಮೀರಿ ರುಜುವಾತು ಪಡಿಸಬೇಕಾಗುತ್ತದೆ.

*1) "ಆರೋಪಿತನು ವಾಹನವನ್ನು ನಡೆಸುತ್ತಿದ್ದನು ಅಥವಾ ಸವಾರಿ ಮಾಡುತ್ತಿದ್ದನು.*

*2) ಅವನು ಸಾರ್ವಜನಿಕ ರಸ್ತೆಯಲ್ಲಿ ವಾಹನವನ್ನು ನಡೆಸುತ್ತಿದ್ದನು ಅಥವಾ ಸವಾರಿ ಮಾಡುತ್ತಿದ್ದನು.*

*3) ಆರೋಪಿತನು ಆ ವಾಹನವನ್ನು ಮನುಷ್ಯನ ಪ್ರಾಣಕ್ಕೆ ಅಪಾಯವುಂಟಾಗುವಂತೆ ಅಥವಾ ಇತರ ಯಾವುದೇ ವ್ಯಕ್ತಿಗೆ ಗಾಯವನ್ನು ಅಥವಾ ಕ್ಷತಿಯನ್ನು ಉಂಟುಮಾಡುವಂತೆ ದುಡುಕಿನಿಂದ ಅಥವಾ ನಿರ್ಲಕ್ಷದಿಂದ ನಡೆಸುತ್ತಿದ್ದನು ಅಥವಾ ಸವಾರಿ ಮಾಡುತ್ತಿದ್ದನು."*

11) ಭಾರತೀಯ ದಂಡ ಸಂಹಿತೆ ಕಲಂಃ 304(ಎ) ರಡಿಯಲ್ಲಿ ದಂಡನೀಯವಾದ ಅಪರಾಧವಾಗಬೇಕಾದರೆ ಈ ಕೆಳಕಂಡಂತೆ ಘಟಕಾಂಶಗಳನ್ನು ಅಭಿಯೋಜನೆಯವರು ಯುಕ್ತ ಸಂಶಯ ಮೀರಿ ರುಜುವಾತುಪಡಿಸಬೇಕು.

*1) ಆರೋಪಿ ತಾನು ಸಾದಾ ಅಥವಾ ತೀವ್ರ ಸ್ವರೂಪದ ಗಾಯಗಳನ್ನು ಉಂಟು ಮಾಡಿದ್ದನು.*

*1) ಆರೋಪಿತನು ವ್ಯಕ್ತಿಯ ಮರಣವನ್ನುಂಟು ಮಾಡಿದನು.*

*2) ಆರೋಪಿತನು ವಾಹನವನ್ನು ಮಾನವೀಯ ಪ್ರಾಣಕ್ಕೆ ಅಪಾಯ ಉಂಟಾಗುವಂತೆ ಅಜಾಗರೂಕತೆಯಿಂದ ಅಥವಾ ನಿರ್ಲಕ್ಷತನದಿಂದ ಚಲಿಸಿದ್ದಾನೆ.*

ಆರೋಪಿಯ ಪ್ರತಿರಕ್ಷೆಯ ಬಗ್ಗೆ ಸಂಕ್ಷಿಪ್ತವಾಗಿ ಹೇಳಬೇಕಾಗಿದೆ. ಅಪಘಾತದ ಪ್ರಕರಣಗಳಲ್ಲಿ, ಚಾಲಕರ ದುರುದ್ದೇಶ ಇರುವುದಿಲ್ಲ. ಅದು ಉದ್ದೇಶ ರಹಿತವಾಗಿರುವ ಕೃತ್ಯ. ಆದುದ್ದರಿಂದ ಅಪಘಾತಕ್ಕೆ ಯಾರು ಕಾರಣೀಭೂತರು ಎಂಬುದು ತುಂಬಾ ಮುಖ್ಯವಾದ ಅಂಶ. ಮೇಲೆ

ಹೇಳಿದ ಘಟಕಾಂಶಗಳನ್ನು ಅಭಿಯೋಜನೆಯವರು ಯುಕ್ತ ಸಂಶಯಮೀರಿ ಸಾಬೀತು ಪಡಿಸುವ ನಿಟ್ಟಿನಲ್ಲಿ ಪ್ರಾಸಾ-1 ರಿಂದ 8 ರವರನ್ನು ಸಾಕ್ಷಿ ಮಾಡಿಸಿರುತ್ತಾರೆ.

12. ಚಾಸಾ-1 ರವರು ಪ್ರಾಸಾ-1 ರವರಂತೆ ಸಾಕ್ಷಿ ಮಾಡಿಕೊಂಡಿದ್ದು, ಇವರು ಈ ಪ್ರಕರಣದಲ್ಲಿ ಮೃತ ಶ್ರೀಕಾಂತನ ತಂದೆ ಇರುತ್ತಾರೆ ಮತ್ತು ಈ ಪ್ರಕರಣದ ಪಿರ್ಯಾದಿ ಇರುತ್ತಾರೆ. ಇವರು ತಮ್ಮ ಸಾಕ್ಷ್ಯದಲ್ಲಿ, ಮೃತ ಶ್ರೀಕಾಂತನು ತನ್ನ ಮಗನಿದ್ದು, ಆತನು ಜೆಸ್ಕಾಂ ಕಂಪನಿಯಲ್ಲಿ ಸಹಾಯಕ ಇಂಜಿನೀಯರ ಅಂತಾ ಕೆಲಸ ಮಾಡುತ್ತಿದ್ದನು. 2011 ರಿಂದ 2012 ರವರೆಗೆ ಬಸವಕಲ್ಯಾಣ ಉಪ ವಿಭಾಗದಲ್ಲಿ ಒಂದು ವರ್ಷ ಕೆಲಸ ಮಾಡಿರುತ್ತಾನೆ. ದಿನಾಂಕಃ 19-03-2013 ರಂದು ಬೆಳಿಗ್ಗೆ 08-00ಗಂಟೆಯ ಸುಮಾರಿಗೆ ಶ್ರೀಕಾಂತನು ಬಸವಕಲ್ಯಾಣ ಮತ್ತು ಹುಣಸೂರಕ್ಕೆ ಹೋಗುತ್ತೇನೆಂದು ಹೇಳಿ ಹಿರೋಹೊಂಡಾ ಮೊಟಾರಸೈಕಲ್ ನಂ. ಕೆಎ-32-ಆರ್-2901ರ ಮೇಲೆ ಹೋಗಿದ್ದು, ಅದೇ ದಿನ ಸಾಯಂಕಾಲ 09-50 ಗಂಟೆಗೆ ತಾನು ಮನೆಯಲ್ಲಿದ್ದಾಗ, ತನ್ನ ಮೊಬೈಲ್ ನಂಬರದಿಂದ ತನ್ನ ಮೊಬೈಲ್‌ಗೆ ಫೋನ ಮಾಡಿ ಈ ನಂಬರ ವಿಚಾರ ಮಾಡಲಾಗಿ, ಅದು ತನ್ನ ಮಗನಿಗೆ ಸಂಬಂಧಿಸಿದ್ದು ಎಂದು ಹೇಳಿದಾಗ, ಸದರಿಯವರು ತಮ್ಮ ಮಗನಿಗೆ ಅಲಗೂಡ ಕ್ರಾಸ ದಾಟಿ ಹಳ್ಳಿಹಳ್ಳ ಬ್ರಿಡ್ಜ್ ಹತ್ತಿರ ಅಪಘಾತವಾಗಿ, ಆತನು ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆಂದು ತಿಳಿಸಿದು, ತಾನು ಫೋನ ಮಾಡಿದವರಿಗೆ, ತಾವು ಯಾರು ಎಂದು ವಿಚಾರ ಮಾಡಿದಾಗ, ಚೆನ್ನವೀರ ಸಲಗರ ತಾಲ್ಲೂಕ ಪಂಚಾಯತಿ ಅದ್ಯಕ್ಷ ಕುರಿಕೋಟಾ ಅಂತಾ ತಿಳಿಸಿದ್ದು, ತಾನು ಊರಿಗೆ ಹೋಗುತ್ತಿದ್ದಾಗ, ಗುಲಬರ್ಗಾ ಕಡೆಯಿಂದ ಒಂದು ಟಂಟಂ ನಂ.ಕೆಎ-09-ಎ-5614 ನೇದ್ದರ ಚಾಲಕನು ತನ್ನ ಟಂಟಂನ್ನು ಅತೀವೇಗ ಮತ್ತು ಅಲಕ್ಷ್ಯತನದಿಂದ ನಡೆಸಿಕೊಂಡು ತನ್ನ ಮುಂದೆ ಹೋಗುತ್ತಿದ್ದ ತಮ್ಮ ಮಗನ ಮೊಟಾರ ಸೈಕಲ್‌ಗೆ ಡಿಕ್ಕಿಪಡಿಸಿದ್ದರಿಂದ ಆತನು ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆಂದು, ಸುದ್ದಿ ತಿಳಿದ ನಂತರ ತಾನು ಮತ್ತು ಚಾಸಾ-6 ರವರು ಕೂಡಿಕೊಂಡು ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ, ಘಟನೆಯ ಸ್ಥಳದಲ್ಲಿ ತನ್ನ ಮಗನು ಬಿದ್ದಿದು, ಸ್ಥಳದಲ್ಲ ಮೊಟಾರ ಸೈಕಲ್ ಮತ್ತು ಅಪಘಾತ ಪಡಿಸಿದ

ಟಂಟಂ ವಾಹನ ಇದ್ದವು. ತಾವು ಹೋಗುವ ಪೂರ್ವದಲ್ಲಿ 108ಗೆ ಫೋನ ಮಾಡಿದ್ದು, ಸ್ಥಳಕ್ಕೆ ಸದರಿ ವಾಹನ ಬಂದಿದ್ದು ತಮ್ಮ ಮಗನು ತೀರಿಕೊಂಡಿದ್ದರಿಂದ ಸದರಿಯವರು 108ರ ಗಾಡಿಯಲ್ಲಿ ತೆಗೆದುಕೊಂಡು ಹೋಗಲು ನಿರಾಕರಿಸಿದ್ದು, ತಾವು ಬೇರೆ ಯಾವುದೋ ಒಂದು ವಾಹನದಲ್ಲಿ ತಮ್ಮ ಮಗನ ಶವವನ್ನು ಹಾಕಿಕೊಂಡು ಸರ್ಕಾರಿ ಆಸ್ಪತ್ರೆಗೆ ತಂದಿದ್ದು, ಘಟನಾ ಸ್ಥಳದಲ್ಲಿ ಪೋಲಿಸರು ತನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆಂದು ಸಾಕ್ಷಿ ತನ್ನ ಹೇಳಿಕೆಯನ್ನು ನಿಶಾನೆ ಪಿ-1 ಎಂದು ಸಹಿಯನ್ನು ನಿಶಾನೆ ಪಿ-1(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಸದರಿ ಅಪಘಾತವು ಟಂಟಂ ವಾಹನ ಚಾಲಕನ ತಪ್ಪಿನಿಂದ ಆಗಿದ್ದು, ತಾನು ಟಂಟಂ ವಾಹನ ಮತ್ತು ಮೊಟಾರ ಸೈಕಲ್ ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ. ಅಪಘಾತವಾದ ಎರಡು ದಿನಗಳ ನಂತರ ಗ್ರಾಮೀಣ ಪೊಲೀಸರು ತನ್ನನ್ನು ಠಾಣೆಗೆ ಕರೆಯಿಸಿ ಆರೋಪಿತನನ್ನು ತೋರಿಸಿದ್ದಾರೆ. ಆತನ ಹೆಸರು ಶಿವಕುಮಾರ ಅಂತಾ ತಿಳಿದು ಬಂದಿದ್ದು, ಆ ಕುರಿತು ತಾನು ಪುರವಣಿ ಹೇಳಿಕೆ ನೀಡಿದ್ದೇನೆಂದು ನುಡಿದಿರುತ್ತಾರೆ. ಘಟನೆಯ ಮರುದಿನ ಗ್ರಾಮೀಣ ಪೊಲೀಸರು 11-00, 11-30 ಗಂಟೆಗೆ ತನಗೆ ಗುನ್ನೆ ಸ್ಥಳಕ್ಕೆ ಕರೆಯಿಸಿ, ತಾನು ತೋರಿಸಿದಂತೆ ಚಾಸಾ-2 ಮತ್ತು 3 ರವರ ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆ ಮಾಡಿದ್ದಾರೆ. ಗುನ್ನೆ ಸ್ಥಳದಿಂದ ಟಂಟಂ ವಾಹನ ಮತ್ತು ಮೊಟಾರ ಸೈಕಲ್‌ನ್ನು ಜಪ್ತಿ ಮಾಡಿಕೊಂಡಿದ್ದಾರೆಂದು ನುಡಿದಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

13. ಚಾಸಾ-2 ಇವರು ಪ್ರಾಸಾ-2 ರಂತೆ ಸಾಕ್ಷಿ ಮಾಡಿಸಿಕೊಂಡಿದ್ದು, ಇವರು ಈ ಪ್ರಕರಣದಲ್ಲಿ ಶವಪಂಚ ಮತ್ತು ಘಟನಾ ಸ್ಥಳದ ಪಂಚನಿರುತ್ತಾನೆ. ಇವರು ತಮ್ಮ ಸಾಕ್ಷ್ಯದಲ್ಲಿ ತನಗೆ ಚಾಸಾ-3 ಮತ್ತು 4 ರವರ ಪರಿಚಯವಿದ್ದು, ಗ್ರಾಮೀಣ ಪೊಲೀಸರು ದಿನಾಂಕಃ 20-03-2013 ರಂದು ಬೆಳಿಗ್ಗೆ 08-30 ಗಂಟೆಗೆ ಗುಲಬರ್ಗಾ ಸರ್ಕಾರಿ ಆಸ್ಪತ್ರೆಗೆ ಕರೆಯಿಸಿ ಮೃತ ಶ್ರೀಕಾಂತ ಇತನ ಶವಪಂಚನಾಮೆಯನ್ನು ಮಾಡಿದ್ದಾರೆ. ಸದರಿ ಮೃತ ಶ್ರೀಕಾಂತನಿಗೆ ರಸ್ತೆ ಅಪಘಾತವಾಗಿದ್ದರಿಂದ ಸದರಿ ಶವಪಂಚನಾಮೆಯನ್ನು ಕೈಗೊಂಡಿದ್ದಾರೆ. ಶವಪಂಚನಾಮೆಯನ್ನು ನಿಪಿ-2 ಎಂದು ತಮ್ಮ

ಸಹಿಯನ್ನು ನಿಪಿ-2(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಅದೇ ದಿನ ಬೆಳಿಗ್ಗೆ 10-30 ರಿಂದ 12-30 ರವರೆಗೆ ತನಗೆ ಮತ್ತು ಚಾಸಾ-4 ರವರನ್ನು ಗುನ್ನೆ ಸ್ಥಳದಲ್ಲಿ ಕರೆಯಿಸಿ, ಚಾಸಾ-1 ರವರು ತೋರಿಸಿದಂತೆ ಗುನ್ನೆ ಸ್ಥಳದ ಪಂಚನಾಮೆ ಮಾಡಿದ್ದಾರೆ. ಗುನ್ನೆ ಸ್ಥಳದಿಂದ ಒಂದು ಹಿರೋಹೊಂಡಾ ಮೊಟಾರ ಸೈಕಲ್ ನಂಬರ್ ಕೆಎ-32-ಆರ್-2901 ಮತ್ತು ಟಂಟಂ ವಾಹನ ನಂಬರ್ ಕೆಎ-09-ಎ-5614ನ್ನು ಗ್ರಾಮೀಣ ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ. ಗುನ್ನೆ ಸ್ಥಳದ ಪಂಚನಾಮೆಯನ್ನು ನಿಶಾನೆ ಪಿ-3 ಎಂದು ತನ್ನ ಸಹಿಯನ್ನು ನಿಶಾನೆ ಪಿ-3(ಎ) ಎಂದು ಗುರುತಿಸಿಕೊಂಡಿದ್ದು, ತಾನು ಟಂಟಂ ವಾಹನ ಮತ್ತು ಮೊಟಾರ ಸೈಕಲ್ ನೋಡಿದರೆ ಗುರುತಿಸುತ್ತೇನೆಂದು ನುಡಿದಿರುತ್ತಾರೆ.

14. ಚಾಸಾ-7 ರವರು ಪ್ರಾಸಾ-3 ರಂತೆ ಸಾಕ್ಷಿ ಮಾಡಿಸಿಕೊಂಡಿದ್ದು, ಇವರು ಈ ಪ್ರಕರಣದಲ್ಲಿ ಮೃತನ ತಮ್ಮ ಮತ್ತು ಮೊಟಾರ ಸೈಕಲ್‌ನ ಮಾಲೀಕನಿರುತ್ತಾನೆ. ಇತನು ತನ್ನ ಸಾಕ್ಷ್ಯದಲ್ಲಿ ಮೃತ ಶ್ರೀಕಾಂತ ತನ್ನ ಅಣ್ಣನಾಗಬೇಕು. ತನ್ನದು ಒಂದು ಹಿರೋಹೊಂಡಾ ಸ್ಲೆಂಡರ್ ಮೊಟಾರ ಸೈಕಲ್ ನಂಬರ್ ಕೆಎ-32-ಆರ್-2901 ಅಂತಾ ಇದ್ದು, ದಿನಾಂಕಃ 19-03-2013 ರಂದು ಬೆಳಿಗ್ಗೆ ತನ್ನ ಅಣ್ಣನಾದ ಶ್ರೀಕಾಂತನು ಬಸವಕಲ್ಯಾಣದಲ್ಲಿ, ಕೆಲಸ ಮಾಡಿಕೊಂಡು ಬರುತ್ತೇನೆಂದು ಹಿರೋಹೊಂಡಾ ಮೊಟಾರಸೈಕಲ್ ತೆಗೆದುಕೊಂಡು ಹೋಗಿರುತ್ತಾನೆ. ರಾತ್ರಿ 10-30 ಗಂಟೆಯ ಸುಮಾರಿಗೆ ಯಾರೋ ಒಬ್ಬನು ತನ್ನ ಅಣ್ಣನ ಮೊಬೈಲ್ ತೆಗೆದುಕೊಂಡು ತಮ್ಮ ತಂದೆಯವರಿಗೆ ತನ್ನ ಅಣ್ಣನಿಗೆ ಆಲಗೂಡ ಕ್ರಾಸ ದಾಟಿದ ನಂತರ ಬ್ರಿಡ್ಜನ ಮೇಲೆ ಟಂಟಂ ವಾಹನ ಅಪಘಾತ ಪಡಿಸಿದೆ ಎಂದು ಫೋನಿನ ಮುಖಾಂತರ ತಿಳಿಸಿದಾಗ, ವಿಷಯ ಗೊತ್ತಾದ ನಂತರ ತಮ್ಮ ತಂದೆ ಹಾಗೂ ಚಾಸಾ-6 ರವರು ಕೂಡಿಕೊಂಡು ಸ್ಥಳಕ್ಕೆ ಹೋಗಿರುತ್ತಾರೆ. ಸದರಿ ಅಪಘಾತವು ಟಂಟಂ ಚಾಲಕನ ತಪ್ಪಿನಿಂದ ಸಂಭವಿಸಿರುತ್ತದೆ ಎಂದು ಗೊತ್ತಾಗಿರುತ್ತದೆ. ಟಂಟಂ ವಾಹನ ನಂಬರ್ ಕೆಎ-09-ಎ-5614 ಅಂತಾ ಇರುತ್ತದೆ. ಈ ಅಪಘಾತದಲ್ಲಿ ತಮ್ಮ ಅಣ್ಣನು ಸ್ಥಳದಲ್ಲಿ ಮೃತಪಟ್ಟಿರುತ್ತಾನೆ. ತನ್ನ ಅಣ್ಣ ತೆಗೆದುಕೊಂಡು ಹೋದ ಮೊಟಾರ ಸೈಕಲ್ ತನ್ನ

ಹೆಸರಿನಲ್ಲಿದ್ದು ತಾನು ಸದರಿ ವಾಹನವನ್ನು ಗ್ರಾಮೀಣ ಪೊಲೀಸ ಠಾಣೆಯಲ್ಲಿ ಬಿಡಿಸಿಕೊಂಡಿದ್ದು, ಮೋಟಾರ ಸೈಕಲ್‌ನ್ನು ನೋಡಿದರೆ, ಗುರುತಿಸುತ್ತೇನೆಂದು ಈ ಕುರಿತು ತಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆಂದು ನುಡಿದಿರುತ್ತಾರೆ.

15. ಚಾಸಾ-6 ರವರು ಪ್ರಾಸಾ-4 ರಂತೆ ಸಾಕ್ಷಿ ಮಾಡಿಕೊಂಡಿದ್ದು, ಇವರು ಈ ಪ್ರಕರಣದಲ್ಲಿ ಪರೋಕ್ಷ ಸಾಕ್ಷಿ ಇರುತ್ತಾರೆ. ಇವರು ತಮ್ಮ ಸಾಕ್ಷ್ಯದಲ್ಲಿ, ತನಗೆ ಚಾಸಾ-1 ಮತ್ತು ಮೃತ ಶ್ರೀಕಾಂತ ಪರಿಚಯವಿದ್ದು, ದಿನಾಂಕಃ 19-03-2013 ರಂದು ರಾತ್ರಿ 10-00 ಗಂಟೆಯ ಸುಮಾರಿಗೆ ಚಾಸಾ-1 ರವರಿಗೆ ಫೋನ ಮಾಡಿ ಅವರ ಮಗನಾದ ಶ್ರೀಕಾಂತನಿಗೆ ಅಪಘಾತವಾಗಿದೆ ಸ್ಥಳಕ್ಕೆ ಹೋಗಲು ಹೇಳಿದ್ದಕ್ಕೆ ತಾನು ತನ್ನ ಮೋಟಾರ ಸೈಕಲ್ ಮೇಲೆ ಚಾಸಾ-1 ರವರನ್ನು ಕರೆದುಕೊಂಡು ಹೋಗಿ ನೋಡಿದ್ದೇನೆ. ಘಟನಾ ಸ್ಥಳದಲ್ಲಿ ಮೃತ ಶ್ರೀಕಾಂತ ಇತನು ರೋಡಿನ ಮೇಲೆ ಬಿದ್ದಿದ್ದು ಆತನ ಕಣ್ಣಿನ ಹುಬ್ಬಿನ ಮೇಲೆ ಮತ್ತು ಬುಜಕ್ಕೆ ಗಾಯಗಳು ಆಗಿದ್ದವು. ನಂತರ ಮೃತ ಹೊಂದಿದ ಶ್ರೀಕಾಂತನ ಶವವನ್ನು ಪೊಲೀಸರು ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ. ಅಲ್ಲಿದ್ದ ಒಬ್ಬ ವ್ಯಕ್ತಿಯನ್ನು ವಿಚಾರ ಮಾಡಿಲಾಗಿ ಆತನು ಶ್ರೀಕಾಂತನು ಹುಮನಾಬಾದ ಕಡೆಯಿಂದ ದ್ವಿಚಕ್ರವಾಹನ ಮೇಲೆ ಬರುತ್ತಿದ್ದಾಗ, ಟಂಟಂ ವಾಹನದ ಚಾಲಕನು ತನ್ನ ಟಂಟಂ ವಾಹನವನ್ನು ಅತೀವೇಗದಿಂದ ಮತ್ತು ಅಲಕ್ಷ್ಯತನದಿಂದ ನಡೆಸಿಕೊಂಡು ಬಂದು ಶ್ರೀಕಾಂತನ ಮೋಟಾರ ಸೈಕಲ್‌ಗೆ ಡಿಕ್ಕಿಪಡಿಸಿದ್ದಾನೆಂದು ತಿಳಿಸಿರುತ್ತಾರೆ.ಅಪಘಾತವಾದ ಸ್ಥಳದಲ್ಲಿ ದ್ವಿಚಕ್ರವಾಹನ ಮತ್ತು ಟಂಟಂ ವಾಹನ ಇದ್ದವು. ಮೋಟಾರ ಸೈಕಲ್ ನಂಬರ್ ಕೆಎ-32-ಆರ್-2901 ಅಂತಾ ಇತ್ತು, ಟಂಟಂ ವಾಹನ ನಂಬರ್ ಕೆಎ-09-ಎ-5614 ಇರುತ್ತದೆ. ಈ ಕುರಿತು ತಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ನಂತರ ಗ್ರಾಮೀಣ ಪೊಲೀಸರು ತನ್ನನ್ನು ಠಾಣೆಗೆ ಕರೆಯಿಸಿ, ಈಗ ನ್ಯಾಯಾಲಯದ ಮುಂದಿರುವ ಆರೋಪಿತನನ್ನು ತೋರಿಸಿದ್ದು, ಈ ಕುರಿತು ತಾನು ಪುರವಣಿ ಹೇಳಿಕೆಯನ್ನು ನೀಡಿದ್ದೇನೆ. ಸಾಕ್ಷಿಯು ಟಂಟಂ ವಾಹನದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು,

ಅವುಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ಸದರಿ ಅಪಘಾತವು ಟಂಟಂ ವಾಹನ ಚಾಲಕನ ತಪ್ಪಿನಿಂದ ಸಂಭವಿಸಿರುತ್ತದೆ ಎಂದು ನುಡಿದಿರುತ್ತಾರೆ.

16. ಚಾಸಾ-5 ಇವರು ಪ್ರಾಸಾ-5 ರಂತೆ ವಿಚಾರಣೆ ಮಾಡಿಸಿಕೊಂಡಿದ್ದು,ಇವರು ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿರುತ್ತಾರೆ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 19-03-2013ರಂದು ರಾತ್ರಿ 09-30 ಗಂಟೆಗೆ ತಾನು ಗುಲಬರ್ಗಾದಿಂದ ತಮ್ಮೂರಾದ ಕುರಿಕೋಟಾಕ್ಕೆ ತನ್ನ ಮೊಟಾರಸೈಕಲ್ ಮೇಲೆ ಹೋಗುತ್ತಿದ್ದಾಗ, ಅಲ್ಲಿಹಳ್ಳ ನಾಲಾದ ಹತ್ತಿರ ಹೋಗುತ್ತಿದ್ದಾಗ, ತಮ್ಮ ಮುಂದೆ ಒಬ್ಬ ಟಂಟಂ ವಾಹನ ಚಾಲಕನು ತನ್ನ ವಾಹನವನ್ನು ಅತೀವೇಗವಾಗಿ ನಡೆಸಿಕೊಂಡು ಹೋಗುತ್ತಿದ್ದು, ಅದೇ ಸಮಯಕ್ಕೆ ಹುಮನಾಬಾದ ಕಡೆಯಿಂದ ಒಬ್ಬ ಮೊಟಾರ ಸೈಕಲ್ ಚಾಲಕನು ಬರುತ್ತಿದ್ದಾಗ, ಸದರಿ ಮೊಟಾರ ಸೈಕಲ್‌ಗೆ ಆಟೋ ಚಾಲಕನು ಆಟೋವನ್ನು ಡಿಕ್ಕಿಪಡಿಸಿರುತ್ತಾನೆ. ಅದರ ಪರಿಣಾಮವಾಗಿ ಮೊಟಾರ ಸೈಕಲ್ ಸವಾರನು ರೋಡಿನ ಮೇಲೆ ಬಿದ್ದಿದ್ದರಿಂದ ಆತನ ತಲೆಗೆ ಮತ್ತು ಕಣ್ಣಿಗೆ ಗಾಯವಾಗಿ, ಸ್ಥಳದಲ್ಲಿ ಮೃತಪಟ್ಟಿರುತ್ತಾನೆ. ಆಟೋ ನಂ. ಕೆಎ-09-56-14 ಇರುತ್ತದೆ. ಸದರಿ ಟಂಟಂ ವಾಹನ ನೀಲಿ ಬಣ್ಣದ್ದು ಇತ್ತು, ನಂತರ ತಾನು ಮೃತಪಟ್ಟ ವ್ಯಕ್ತಿಯ ಹತ್ತಿರ ಇದ್ದ ಮೊಬೈಲ್‌ದಿಂದ ಆತನು ಡೈಯಲ್ ಮಾಡಿದ ನಂಬರಗೆ ಮಾತನಾಡಿದಾಗ, ಸದರಿ ವ್ಯಕ್ತಿಯಾದ ಅಣ್ಣಪ್ಪ ಎಂಬುವವರಿಗೆ ಫೋನ ಹೋಗಿದ್ದು ಅವರಿಗೆ ಸದರಿ ವಿಷಯವನ್ನು ತಿಳಿಸಿರುತ್ತೇನೆ. ಸದರಿ ಅಪಘಾತವು ಟಂಟಂ ಚಾಲಕನ ತಪ್ಪಿನಿಂದ ಸಂಭವಿಸಿರುತ್ತದೆ. ಈ ಬಗ್ಗೆ ತಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದು, ಅಪಘಾತನದ ಸ್ಥಳದಲ್ಲಿ ಟಂಟಂ ವಾಹನದ ಚಾಲಕನ್ನು ನೋಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ. ನಂತರ ಪೊಲೀಸರು ಪುನಃ ತನ್ನನ್ನು ಪೊಲೀಸ ಠಾಣೆಗೆ ಕರೆಸಿ, ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಗುರುತಿಸಲು ಹೇಳಿದ್ದು, ತಾನು ಗುರುತಿಸಿರುತ್ತೇನೆ. ಆ ಕುರಿತು ತಾನು ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಟಂಟಂ ವಾಹನ ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

17. ಚಾಸಾ-12 ರವರು ಪ್ರಾಸಾ-6 ರಂತೆ ಸಾಕ್ಷಿ ಮಾಡಿಸಿಕೊಂಡಿದ್ದು, ಇವರು ಈ ಪ್ರಕರಣದಲ್ಲಿ ತನಿಖಾಧಿಕಾರಿ ಇದ್ದು, ಇವರು ತಮ್ಮ ಸಾಕ್ಷದಲ್ಲಿ ದಿಃ 20-03-2013 ರಂದು ಪ್ರಕರಣದ ಕಡತವನ್ನು ಚಾಸಾ-12 ರವರಿಂದ ವಹಿಸಿಕೊಂಡಿದ್ದು, ಅದೇ ದಿವಸ ಗುಲಬರ್ಗಾದ ಸರ್ಕಾರಿ ಆಸ್ಪತ್ರೆಯಲ್ಲಿ ಇರುವ ಶವಾಗಾರಕ್ಕೆ ಭೇಟಿ ನೀಡಿ ಚಾಸಾ-2 ಮತ್ತು 3 ರವರ ಸಮಕ್ಷಮ ಶವಪಂಚನಾಮೆಯನ್ನು ಮುಂಜಾನೆ 09-30 ರಿಂದ 10-00 ಗಂಟೆಯವರೆಗೆ ಮಾಡಿರುತ್ತೇನೆ. ಶವಪಂಚನಾಮೆ ಮೇಲಿರುವ ತಮ್ಮ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಿಕೊಂಡಿರುತ್ತಾರೆ. ಅದೇ ದಿವಸ 11-30 ರಿಂದ 12-30 ರವರೆಗೆ ಗುನ್ಹೆ ಸ್ಥಳಕ್ಕೆ ಭೇಟಿ ನೀಡಿ ಚಾಸಾ-1 ರವರು ತೋರಿಸಿದಂತೆ ಚಾಸಾ-1 ಮತ್ತು ಚಾಸಾ-4 ರವರ ಸಮಕ್ಷಮ ಗುನ್ಹೆ ಜಾಗೆಯ ಪಂಚನಾಮೆ ಮಾಡಿ ಗುನ್ಹೆ ಜಾಗೆಯಿಂದ ಅಪಘಾತಪಡಿಸಿದ ಟಂಟಂ ಕೆಎ-09-ಎ-5614 ಮತ್ತು ಹಿರೋ ಹೊಂಡಾ ಕೆಎ-32-ಆರ್-2901 ವಾಹನವನ್ನು ಜಪ್ತಿಪಡಿಸಿಕೊಂಡಿರುತ್ತೇನೆ. ಮತ್ತು ಗುನ್ಹೆ ಜಾಗೆಯ ಕಚ್ಚಾ ನಕಾಶೆಯನ್ನು ತೆಗೆದಿರುತ್ತೇನೆ ಎಂದು ಗುನ್ಹೆ ಜಾಗೆಯ ಪಂಚನಾಮೆಯ ಮೇಲೆ ಇರುವ ತಮ್ಮ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಿಕೊಂಡಿರುತ್ತಾರೆ. ಕಚ್ಚಾ ನಕಾಶೆಯನ್ನು ನಿಪಿ-7 ಎಂದು ಮತ್ತು ಸಹಿಯನ್ನು ನಿಪಿ-7(ಎ) ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ಅದೇ ದಿವಸ ಚಾಸಾ-5 ಮತ್ತು 6 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿಃ 22-03-2013 ರಂದು ಆರೋಪಿತನು ಠಾಣೆಗೆ ಖುದ್ದಾಗಿ ಹಾಜರಾಗಿದ್ದು, ಆತನನ್ನು ಚಾಸಾ-1, 5 ಮತ್ತು 6 ರವರಿಗೆ ತೋರಿಸಿ, ಪುರವಣಿ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಆರೋಪಿತನನ್ನ ದಸ್ತಗಿರಿ ಮಾಡಿ ಬಿಡುಗಡೆ ಮಾಡಿರುತ್ತೇನೆಂದು, ದಿನಾಂಕಃ 25-03-2013 ರಂದು ಜಪ್ತಿಪಡಿಸಿಕೊಂಡ ವಾಹನಗಳನ್ನು ಪರೀಕ್ಷೆಯ ಸಲುವಾಗಿ ಆರ್.ಟಿ.ಓ ರವರಿಗೆ ಮನವಿ ಮಾಡಿಕೊಂಡಿದ್ದು, ದಿಃ03-04-2013 ರಂದು ಪಿಎಮ್ಇ ವರದಿಯನ್ನು ಚಾಸಾ-10 ರವರಿಂದ ಪಡೆದಿದ್ದು, ಸದರಿ ವರದಿಯನ್ನು ಮೇಲಿರುವ ತನ್ನ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಿಕೊಂಡಿರುತ್ತಾರೆ. ದಿಃ12-04-2013 ರಂದು ಚಾಸಾ-7 ರವರ ಹೇಳಿಕೆಯನ್ನು ಪಡೆದುಕೊಂಡಿದ್ದು, ಅದೇ ದಿವಸ ಜಪ್ತಿ ಪಡಿಸಿಕೊಂಡ ಟಂಟಂ

ವಾಹನದ ಮಾಲೀಕನಾದ ಶಿವಕುಮಾರ ತಂದೆ: ಮಾಲೀಕಪ್ಪರವರಿಗೆ ಬಾಂಡನ್ನು ಬರೆಸಿಕೊಂಡು ಬಿಡುಗಡೆ ಮಾಡಿದ್ದು, ಸದರಿ ಬಾಂಡನ್ನು ನಿಪಿ-8 ಎಂದು ಸಹಿಯನ್ನು ನಿಪಿ-8(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಅದೇ ದಿನ ಚಾಸಾ-9 ರವರಿಂದ ಮೋಟಾರ ವಾಹನ ಪರಿಶೀಲನಾ ವರ ದಿಯನ್ನು ಪಡೆದಿದ್ದು, ಅದನ್ನು ನಿಪಿ-9 ಎಂದು ತಮ್ಮ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಿಕೊಂಡಿರುತ್ತಾರೆ. ತನಿಖೆ ಸಂಪೂರ್ಣಗೊಂಡಿದ್ದರಿಂದ ಆರೋಪಿತನ ವಿರುದ್ದ ಆರೋಪ ಸಾಬೀತಾಗಿದ್ದರಿಂದ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆಂದು ನುಡಿದಿರುತ್ತಾರೆ. ಮೋಟಾರ ಸೈಕಲ್ ಮತ್ತು ಟಂಟಂ ವಾಹನದ ಭಾವಚಿತ್ರಗಳನ್ನು ಮತ್ತು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

18. ಚಾಸಾ-9 ರವರು ಪ್ರಾಸಾ-7 ರಂತೆ ಸಾಕ್ಷಿ ಮಾಡಿಸಿಕೊಂಡಿದ್ದು, ಇವರು ಮೋಟಾರ ವಾಹನ ಪರಿಶೀಲನೆ ವರದಿಯನ್ನು ನೀಡಿದ ಸಾಕ್ಷಿ ಇರುತ್ತಾರೆ. ಇವರು ತಮ್ಮ ಸಾಕ್ಷ್ಯದಲ್ಲಿ, ದಿ: 23-05-2013 ರಂದು ಗ್ರಾಮೀಣ ಠಾಣೆಯಿಂದ ಸಿಪಿಐ ರವರು ಕೆಎ-09-ಎ-5614 ಮತ್ತು ಕೆಎ-32-ಆರ್-2901ನ್ನು ತಪಾಸಣೆ ಮಾಡಲು ಮನವಿ ಮಾಡಿದ್ದು ಅದೇ ದಿವಸ ಮದ್ಯಾಹ್ನ 2-45 ಗಂಟೆಯ ಸುಮಾರಿಗೆ ಗ್ರಾಮೀಣ ಠಾಣೆಯ ಆವರಣದಲ್ಲಿ ಇರುವ ಮೇಲೆ ಹೇಳಿದ ಎರಡೂ ವಾಹನಗಳನ್ನು ಪರಿಶೀಲಿಸಿದ್ದೇನೆಂದು, ವಾಹನ ನಂ. ಕೆಎ-09-ಎ-5614ನ್ನು ಪರಿಶೀಲನೆ ಮಾಡಿದಾಗ, ಅದರ ಮುಂದಿನ ವಿಂಡಸ್ಕ್ರಿನ್ ಗ್ಲಾಸ್ ಮತ್ತು ಮುಖ್ಯ ಲೈಟ್‌ಗಳು ಜಖಂಗೊಂಡಿದ್ದವು. ಮುಂದಿನ ಗಾಲಿಯ ಮಡಗಾರ್ಡ್ ಕ್ಯಾಬಿನಿನ ಎಡಬಾಗಿಲು ಮತ್ತು ಗ್ಲಾಸ ಜಖಂಗೊಂಡಿದ್ದವು. ವಾಹನ ಮುಂದಿನ ಎಡಗಡೆಯ ಭಾಗದ ಸೇಫ ನೆಗ್ಗಿದ್ದು, ಜಖಂಗೊಂಡಿರುತ್ತದೆ. ಇನ್ನೊಂದು ವಾಹನ ಕೆಎ-32-ಆರ್-2901ನ್ನು ತಪಾಸಣೆ ಮಾಡಿದಾಗ, ಮುಂದಿನ ಎರಡೂ ಶಾಕ್ ಪಜರ್‌ಗಳು, ಹೆಡ್‌ಲೈಟ್ ಮತ್ತು ಎರಡು ಇಂಡಿಕೇಟರ್, ಸ್ಪಿಡೋಮೀಟರ್ ಮತ್ತು ಇತರೇ ಗೇಜುಗಳು ಜಖಂ ಆಗಿದ್ದು ಕಂಡುಬಂದಿದ್ದವು. ಅದರ ಹ್ಯಾಂಡಲ್ ಬೆಂಡಾಗಿರುತ್ತದೆ. ಮುಂದಿನ ಗಾಲಿನ ಮಡಗಾರ್ಡ್ ಜಖಂ ಆಗಿತ್ತು, ವಾಹನದ ಹಿಂ

ದಿನ ಗಾಲಿಯ ಟೈರ ಒಡೆದಿತ್ತು, ಮತ್ತು ಅದರ ಹಿಂದಿನ ಎರಡೂ ಇಂಡಿಕೇಟರ ಜಖಂ ಆಗಿದ್ದು ಕಂಡುಬಂದಿರುತ್ತದೆ. ಎರಡೂ ವಾಹನಗಳನ್ನು ಪರೀಕ್ಷೆ ಮಾಡಿದಾಗ, ಅವುಗಳ ಬ್ರೆಕ್ ಪದ್ದತಿ ಸುಸ್ಥಿತಿಯಲ್ಲಿತ್ತು. ತನ್ನ ಅಭಿಪ್ರಾಯದಲ್ಲಿ ವಾಹನಗಳ ಯಾವುದೇ ತಾಂತ್ರಿಕ ದೋಷದಿಂದ ಅಪಘಾತ ಸಂಭವಿಸಿರುವುದಿಲ್ಲ ಅಂತಾ ಅಭಿಪ್ರಾಯಪಟ್ಟು ನಿಪಿ-9 ರಂತೆ ವರದಿಯನ್ನು ನೀಡಿದ್ದು, ತಮ್ಮ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಿಕೊಂಡಿರುತ್ತಾರೆ. ತಾನು ಪರೀಕ್ಷೆ ಮಾಡಿದ ಎರಡೂ ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಭಾವಚಿತ್ರಗಳನ್ನು ನೋಡಿ ಗುರುತಿಸಿಕೊಂಡಿರುತ್ತಾರೆ.

19. ಚಾಸಾ-11 ರವರನ್ನು ಪ್ರಾಸಾ-8 ರಂತೆ ವಿಚಾರಣೆ ಮಾಡಿಸಿಕೊಂಡಿದ್ದು, ಇವರು ಈ ಪ್ರಕರಣದಲ್ಲಿ ಮೊದಲ ತನಿಖಾಧಿಕಾರಿ ಇರುತ್ತಾರೆ. ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 19-03-2013 ರಂದು ರಾತ್ರಿ 10-00 ಗಂಟೆಯ ಸುಮಾರಿಗೆ ಜಿಲ್ಲಾ ನಿಸ್ತಂತು ಮೂಲಕ ಅಲಗೋಡಾ ಕ್ರಾಸ ದಾಟಿ ಹುಮನಾಬಾದ ರಸ್ತೆಯಲ್ಲಿ ಟಂಟಂ ಮತ್ತು ಮೊಟಾರಸೈಕಲ್‌ಗೆ ಅಪಘಾತವಾಗಿ ಸ್ಥಳದಲ್ಲಿ ಒಬ್ಬ ವ್ಯಕ್ತಿ ತೀರಿಕೊಂಡ ಬಗ್ಗೆ ಮಾಹಿತಿ ಬಂದಿದ್ದು, ತಾನು ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ ಹಾಜರಿದ್ದ ಶ್ರೀಕಾಂತ ರವರ ತಂದೆ ಅಣ್ಣಪ್ಪ ತಂದೆಃ ಹನಮಂತ ರವರ ಹೇಳಿಕೆ ಪಿರ್ಯಾದಿಯನ್ನು ರಾತ್ರಿ 11-00 ರಿಂದ 12-00 ಗಂಟೆಯವರೆಗೆ ಪಡೆದುಕೊಂಡು ಮರಳಿ ಠಾಣೆಗೆ ಹಾಜರಾಗಿ ದಿಃ 20-03-2013 ರಂದು 00-30 ಗಂಟೆಗೆ ಸದರಿ ಹೇಳಿಕೆಯ ಸಾರಾಂಶದ ಮೇಲೆ ಠಾಣೆಯ ಗುನ್ನೆ ನಂ. 144/2013 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇನೆಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ-10 ಎಂದು ಸಹಿಯನ್ನು ನಿಪಿ-10(ಎ) ಎಂದು ನಿಪಿ-1ರ ಮೇಲೆ ಇರುವ ತಮ್ಮ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಿಕೊಂಡಿರುತ್ತಾರೆ. ಪ್ರಕರಣವು ಘೋರ ಅಪರಾಧವಾಗಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ-12 ರವರಿಗೆ ವಹಿಸಿದ್ದೇನೆಂದು ಸಾಕ್ಷಿ ನುಡಿದಿರುತ್ತಾರೆ.

20. ಪ್ರಾಸಾ-1 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದ್ದು, ಪಾಟೀಸವಾಲಿನಲ್ಲಿ, ತನ್ನ ಮಗನಿಗೆ ಅಪಘಾತವಾಗಿರುವುದರ ಬಗ್ಗೆ ಚೆನ್ನವೀರ ಇವರು ಫೋನ ಮಾಡಿ ತಿಳಿಸಿದ್ದರು ಎನ್ನುವ ವಿಷಯವನ್ನು ಅಲ್ಲಗಳೆದಿರುತ್ತಾರೆ. ಚಾಸಾ-2 ಮತ್ತು 3 ರವರನ್ನು ಪೋಸ್ಟ ಮಾರ್ಟಮ್ ಮಾಡುವ ಸಂಧರ್ಭದಲ್ಲಿ ಪೊಲೀಸರು ಕರೆದುಕೊಂಡುಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಇವರನ್ನು ಧೀರ್ಘಕಾಲದ ವರೆಗೆ ಪಾಟೀಸವಾಲು ಮಾಡಿದ್ದು, ಪಾಟೀಸವಾಲಿನಲ್ಲಿ, ಯಾವುದೇ ರೀತಿಯ ಒಪ್ಪಿಗೆಯನ್ನಾಗಲೀ, ಉತ್ತರವನ್ನಾಗಲೀ ಪಡೆದುಕೊಂಡಿರುವುದಿಲ್ಲ. ಇವರು ನಿಪಿ-1 ರಲ್ಲಿ ಹೇಳಿರುವಂತೆ ಸಾಕ್ಷಿ ನುಡಿ ದಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಚೆನ್ನವೀರ ಎನ್ನುವವರು ಪೋನ ಮಾಡಿದ್ದು, ಅಪಘಾತದ ಕುರಿತು ತಿಳಿಸಿರುತ್ತಾರೆಂದು ನುಡಿದಿರುತ್ತಾರೆ. ಇವರ ಸಾಕ್ಷ್ಯವನ್ನು ಮತ್ತು ಪ್ರಾಸಾ-5 ರವರ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ಮುಖ್ಯ ವಿಚಾರಣೆಯಲ್ಲಿ ಒಂದಕ್ಕೊಂದು ಹೋಲಿಕೆಯಾಗುತ್ತಿರುವುದು ಕಂಡು ಬರುತ್ತದೆ. ಪ್ರಾಸಾ-5 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದ್ದು ಪಾಟೀಸವಾಲಿನಲ್ಲಿ, ಅಪಘಾತವಾದ ಸ್ಥಳ ರಾಷ್ಟ್ರಿಯ ಹೆದ್ದಾರಿ ಇರುತ್ತದೆ ಎಂಬುವುದನ್ನು ಒಪ್ಪಿಕೊಂಡಿರುತ್ತಾರೆ. ಮತ್ತು ತಾನು ಹೋಗುವಾಗ ರಸ್ತೆಯ ಮೇಲೆ ತನ್ನ ಅಕ್ಕ-ಪಕ್ಕ ಯಾವುದೇ ವಾಹನಗಳು ಇರಲಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಮತ್ತು ರಾಷ್ಟೀಯ ಹೆದ್ದಾರಿ ಇರುವುದರಿಂದ ರಸ್ತೆಯ ಮೇಲೆ ಬಾರಿ ವಾಹನಗಳು ಒಡಾಡುತ್ತವೆ ಎಂದು ಒಪ್ಪಿಕೊಂಡಿರುತ್ತಾರೆ. ಘಟನೆ ನಡೆದ ದಿನದಂದು ಘಟನೆ ನಡೆದ ತಕ್ಷಣ ಘಟನಾ ಜಾಗದಲ್ಲಿ ಬಹಳಷ್ಟು ಜನರು ಸೇರಿದ್ದರು. ಮತ್ತು ಎಷ್ಟು ಜನರು ಇದ್ದರು ಎಂಬುವುದನ್ನು ನಾನು ಗಮನಿಸಿರುವುದಿಲ್ಲ. ಮತ್ತು ಘಟನಾಪೂರ್ವದಲ್ಲಿ ಆರೋಪಿತನಿಗೂ ಮತ್ತು ತನಗೂ ಪರಿಚಯ ಇರುವುದನ್ನು ಒಪ್ಪಿಕೊಂಡಿರುತ್ತಾರೆ. ಘಟನೆ ನಡೆದ ತಕ್ಷಣ ಆರೋಪಿತನೇ ತನ್ನ ಬಳಿಗೆ ಬಂದು ಅಪಘಾತದ ಕುರಿತು ತಿಳಿಸಿರುತ್ತಾನೆಂದು ನುಡಿದಿರುತ್ತಾರೆ. ಆದರೇ, ತಾನು ಮೃತನ ತಂದೆಯವರಿಗೆ ಪೋನ ಮಾಡಿದಾಗ, ಶಿವಕುಮಾರ ಇತನೇ ಅಪಘಾತ ಮಾಡಿದ್ದಾನೆಂದು ಹೇಳಿರುವುದಿಲ್ಲ, ಅದೇ ರೀತಿ ಪೊಲೀಸರ ಮುಂದೆ ಅಪಘಾತವನ್ನು ಆರೋಪಿತನೇ

ಮಾಡಿದ್ದಾನೆಂದು ಹೇಳಿರುವುದಿಲ್ಲ ಎಂದು ನುಡಿದಿರುತ್ತಾನೆ. ಮತ್ತು ಆರೋಪಿತನು ಅಪಘಾತ ನಡೆಯುವ ಪೂರ್ವದಲ್ಲಿ, ಟಂಟಂ ವಾಹನವನ್ನು ನಡೆಸುವ ವಿಷಯ ತನಗೆ ಗೊತ್ತಿತ್ತು ಎಂಬುವುದನ್ನು ಒಪ್ಪಿಕೊಂಡಿರುತ್ತಾನೆ. ಅಪಘಾತದ ನಂತರ ಶ್ರೀಕಾಂತನನ್ನು ಆಸ್ಪತ್ರೆಗೆ ತೋರಿಸುವ ಸಂಬಂಧ ಯಾರಿಗೂ ಫೋನ ಮಾಡಿರುವುದಿಲ್ಲ, ಆದರೇ 108 ಎಂಬುಲೆನ್ಸ್‌ಗೆ ಪೋನ ಮಾಡಿರುತ್ತೇನೆ. ಘಟನಾ ಜಾಗದಲ್ಲಿ ನೆರೆದಿರುವ ಜನರಿಗೂ ಕೂಡ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಕುರಿತು ಕೇಳಿರುವುದಿಲ್ಲ, ಮತ್ತು ಪೊಲೀಸರ ಮುಂದೆ ತಾನೇ ಎಂಬುಲೆನ್ಸ್‌ಗೆ ಪೋನ ಮಾಡಿದ್ದೇನೆ ಎಂಬ ವಿಷಯವನ್ನು ಹೇಳಿರುವುದಿಲ್ಲ, ಇದೇ ಮೊದಲು ನ್ಯಾಯಾಲಯದಲ್ಲಿ ಹೇಳುತ್ತಿರುವುದನ್ನು ಒಪ್ಪಿಕೊಂಡಿರುತ್ತಾನೆ. ಆರೋಪಿತನು ಘಟನಾ ಜಾಗದಲ್ಲಿಯೇ ತನ್ನ ತಪ್ಪಿನಿಂದ ಅಪಘಾತವಾಗಿರುತ್ತದೆ ಎನ್ನುವುದನ್ನು ಒಪ್ಪಿಕೊಂಡಿರುತ್ತಾನೆ. ಆರೋಪಿತನು ಘಟನಾ ಜಾಗದಿಂದ ಶವವನ್ನು ಒಯ್ಯುವ ವರೆಗೂ ಅಲ್ಲಿಯೇ ಇದ್ದನು. ತನಗೂ ಮತ್ತು ಪೊಲೀಸರಿಗೂ ಒಳ್ಳೆಯ ಸಂಬಂಧ ಇರುವುದನ್ನು ಒಪ್ಪಿಕೊಂಡಿರುತ್ತಾನೆ. ಆರೋಪಿತನು ಅಪಘಾತ ಮಾಡಿರುವ ವಿಷಯವನ್ನು ಪೊಲೀಸರ ಬಳಿ ತಕ್ಷಣ ಹೇಳಬೇಕು ಅಂತಾ ಅನ್ನಿಸಲಿಲ್ಲ, ಪೋಲಿಸರು ತನ್ನ ಹೇಳಿಕೆಯನ್ನು ಠಾಣೆಯಲ್ಲಿ ಪಡೆದಿರುತ್ತಾರೆ. ಆ ಸಮಯದಲ್ಲಿ ಸಿಪಿಐ ರವರು ಇರುವುದರ ಬಗ್ಗೆ ತಾನು ಗಮನಹರಿಸಿರುವುದಿಲ್ಲ. ದಿನಾಂಕಃ 20-03-2013 ರಂದು ನೀಡಿದ ಹೇಳಿಕೆಯಲ್ಲಿ ಟಂಟಂ ನಂ. ಕೆಎ-09-ಎ-5614 ನೇದ್ದರ ಚಾಲಕನು ಸ್ಥಳದಿಂದ ಓಡಿಹೋದನು ಎಂಬ ವಿಷಯವನ್ನು ತಾನು ಹೇಳಿ ಬರೆಸಿರುವುದಿಲ್ಲ ಎಂದು ನುಡಿದಿದ್ದು, ಸದರಿ ಹೇಳಿಕೆಯ ಭಾಗವನ್ನು ನಿಡಿ-1 ಎಂದು ಗುರುತಿಸಿಕೊಂಡಿರುತ್ತಾರೆ. ಮೃತನ ತಂದೆಯವರು ಘಟನಾ ಜಾಗಕ್ಕೆ ಬಂದಾಗ ಬಹಳ ಜನರು ನೆರೆದಿದ್ದರು. ಘಟನಾ ಜಾಗದಲ್ಲಿ ಅಂಕಲಗಾ ಮತ್ತು ತಮ್ಮ ಊರಿನ ಜನರು ಸೇರಿದ್ದು ಅವರ ಹೆಸರು ನೆನಪಿರುವುದಿಲ್ಲ, ಘಟನೆ ನಡೆದ ನಂತರ ಒಂದು ಬಾರಿ ಮಾತ್ರ ಪೊಲೀಸ ಠಾಣೆಗೆ ಹೋಗಿರುತ್ತೇನೆ. ಒಂದು ಬಾರಿ ಮಾತ್ರ ಹೇಳಿಕೆ ನೀಡಿರುತ್ತೇನೆ. ಮತ್ತು ಹೇಳಿಕೆ ನೀಡಿದ ದಿನದಂದೇ ಆರೋಪಿಯನ್ನು ತೋರಿಸುವ ಸಂಬಂಧ ಕರೆಸಿದ್ದರು. ದಿನಾಂಕಃ 19-03-2003 ರಂದು ಅಳ್ಳಿಹಳ್ಳ ಹತ್ತಿರ ರಸ್ತೆಯಲ್ಲಿ ಅಪಘಾತಪಡಿಸಿದ ಟಂಟಂ ಆಟೋ ನಂ. ಕೆಎ-09-ಎ-5416ನೇದ್ದರ

ಚಾಲಕನು ಶಿವಕುಮಾರ ಇದ್ದು, ಆತನನ್ನು ನೋಡಿ ಗುರುತಿಸಿರುತ್ತೇನೆ ಅಂತಾ ಅದೇ ದಿನ ಹೇಳಿ ಬರೆಸಿರುತ್ತೇನೆ. ತಾನು ತನ್ನ ಹೇಳಿಕೆಯಲ್ಲಿ ಆರೋಪಿತನನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದು ಹೇಳಿ ಬರೆಸಿದ್ದು ನನ್ನ ಸಾಕ್ಷಿಯಲ್ಲಿ ಈ ಮೊದಲು ಆರೋಪಿತನನ್ನು ನೋಡಿರುವುದಾಗಿ ಹೇಳಿದ್ದೇನೆ ಎಂಬುವುದರಲ್ಲಿ ಸಾಕ್ಷಿಯಲ್ಲಿ ತಾನು ನ್ಯಾಯಾಲಯದಲ್ಲಿ ಹೇಳಿದ ಸಾಕ್ಷಿಯು ನಿಜವಾಗಿರುತ್ತದೆ ಎಂದು ನುಡಿದಿರುತ್ತಾರೆ.

21. ತನಗೆ ಯಳವಂತಗಿ (ಬಿ) ಗ್ರಾಮದ ಅಜೀಜ ಪಟೇಲ ಇತನ ಪರಿಚಯವಿದ್ದು, ಇತನು ಸತತವಾಗಿ, ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಗೆಲ್ಲುತ್ತಾ ಬಂದಿರುವುದನ್ನು ಒಪ್ಪಿಕೊಂಡಿರುತ್ತಾರೆ. ತನಗೆ ಟಂಟಂ ಆಟೋದ ಮಾಲೀಕ ಯಾರು ಎಂಬುದು ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ತಾನು ಘಟನೆಯ ಜಾಗದಲ್ಲಿ ಅರ್ಧ ಗಂಟೆ ಇದ್ದು, ನಂತರ ಹೋಗಿರುತ್ತೇನೆ. ಘಟನೆಯು ಹಿರೋಹೊಂಡಾ ಮೊಟಾರ ಸೈಕಲ್‌ಗೆ ಟಂಟಂ ವಾಹನ ಚಾಲಕನು ಡಿಕ್ಕಿಪಡಿಸಿದ್ದರಿಂದ ಅಪಘಾತವಾಗಿರುತ್ತದೆ ಎಂಬುದರ ಕುರಿತು ತಾನು ಯಾರ ತಪ್ಪಿನಿಂದ ಆಗಿರುತ್ತದೆ ಎಂಬುದು ತನಗೆಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಇಲ್ಲಿ ಪ್ರಾಸಾ-1 ಮತ್ತು 5 ರವರ ಪಾಟೀಸವಾಲನ್ನು ಪರಿಶೀಲಿಸಿದಾಗ, ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ, ಪ್ರಾಸಾ-5 ರವರು ತನಗೆ ಪೋನ ಮಾಡಿ ಅಪಘಾತವಾಗಿರುವ ವಿಷಯ ತಿಳಿಸಿದ್ದು, ಅದು ಆರೋಪಿತನ ತಪ್ಪಿನಿಂದ ಸಂಭವಿಸಿರುತ್ತದೆ ಎಂದು ನುಡಿದಿರುತ್ತಾರೆ. ಅದೇ ಪ್ರಾಸಾ-5 ರವರು ತಾನು ಪೋನಿನಲ್ಲಿ ಅಪಘಾತವಾಗಿರುವ ವಿಷಯ ತಿಳಿಸಿದ್ದು, ಅದು ಯಾರ ತಪ್ಪಿನಿಂದ ಸಂಭವಿಸಿರುತ್ತದೆ ಮತ್ತು ಆರೋಪಿತನ ಕುರಿತು ತಿಳಿಸಿರುವುದಿಲ್ಲ, ಅದೇ ರೀತಿ ಪೊಲೀಸರ ಮುಂದೆಯೂ ಕೂಡ ಆರೋಪಿತನು ಅಪಘಾತ ಮಾಡಿದ್ದಾನೆಂಬ ವಿಷಯವನ್ನು ಹೇಳಿರುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರಾಸಾ-5 ರವರು ಈ ಪ್ರಕರಣದಲ್ಲಿ ಪ್ರತ್ಯೆಕ್ಷ ಸಾಕ್ಷಿ ಇದ್ದು, ಇವರು ಅಪಘಾತವನ್ನ ಕಣ್ಣಾರೆ ನೋಡಿದ ಸಾಕ್ಷಿ ಇರುತ್ತಾರೆ. ಇವರು ಘಟನೆಯ ದಿನದಂದು ಪೊಲೀಸರಿಗಾಗಲೀ ಮತ್ತು ಪ್ರಾಸಾ-1 ರವರಿಗಾಗಲೀ ಆರೋಪಿತನ ವಿಷಯವನ್ನು ತಿಳಿಸಿರುವುದಿಲ್ಲ, ನಂತರ ಆತನ

ವಿಷಯವನ್ನು ತಿಳಿಸಿರುವುದಾಗಿ ನುಡಿದಿರುತ್ತಾರೆ. ಇಲ್ಲಿ ಪ್ರಾಸಾ-5 ರವರ ಸಾಕ್ಷ್ಯವನ್ನು ಮತ್ತು ಪಾಟೀಸವಾಲನ್ನು ಪರಿಶೀಲಿಸಲಾಗಿ, ಮುಖ್ಯ ವಿಚಾರಣೆಗೂ ಮತ್ತು ಪಾಟೀಸವಾಲಿಗೂ ಬಹಳ ವಿರೋದೋಕ್ತಿಗಳು ಕಂಡುಬರುತ್ತವೆ. ಮತ್ತು ಇತನು ತನ್ನ ಪಾಟೀಸವಾಲಿನಲ್ಲಿ ತಾನು ಪೊಲೀಸ ಠಾಣೆಗೆ ಒಂದು ಬಾರಿ ಹೋಗಿದ್ದು, ಮತ್ತೆ ಯಾವತ್ತು ಠಾಣೆಗೆ ಹೋಗಿರುವುದಿಲ್ಲ. ಮತ್ತು ಆರೋಪಿತನನ್ನ ಗುರುತಿಸಿರುವುದಾಗಿ, ತಾನು ಯಾವುದೇ ಹೇಳಿಕೆಯನ್ನು ನೀಡಿರುವುದಾಗಿ ನುಡಿ ದಿರುವುದಿಲ್ಲ ಎಂದು ಮತ್ತು ಅಪಘಾತಪಡಿಸಿದ ನಂತರ ಅಪಘಾತಪಡಿಸಿದ ವಾಹನದ ಚಾಲಕನು ಅಲ್ಲಿಂದ ಓಡಿಹೋಗಿರುತ್ತಾನೆಂದು ತಾನು ಹೇಳಿರುವುದಿಲ್ಲ ಎಂದು ನುಡಿದಿರುತ್ತಾನೆ. ಮತ್ತು ತಾನು ಈ ಮೊದಲೇ ಆರೋಪಿಯನ್ನು ನೋಡಿರುವುದಾಗಿ, ನುಡಿದಿರುತ್ತಾನೆ. ಮತ್ತು ಅಪಘಾತವು ಆರೋಪಿನ ತಪ್ಪಿನಿಂದಲೇ ಸಂಭವಿಸಿರುತ್ತದೆ ಎಂದು ನುಡಿದಿರುತ್ತಾನೆ. ತನ್ನ ಪಾಟೀಸವಾಲಿನಲ್ಲಿ ಆರೋಪಿತನು ಅಪಘಾತದವಾದ ತಕ್ಷಣ ಆತನೆ ತನ್ನ ಬಳಿ ಬಂದು ತನ್ನ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ಹೇಳಿದ್ದು, ಆತನು ಶವವನ್ನು ಒಯ್ಯುವವರೆಗೆ ಘಟನಾ ಜಾಗದಲ್ಲಿ ಇದ್ದನು ಎಂದು ನುಡಿಯುತ್ತಾರೆ. ಒಂದು ವೇಳೆ ನಿಜವಾಗಲೂ ಆರೋಪಿತನ ತಪ್ಪಿನಿಂದಲೇ ಅಪಘಾತ ಸಂಭವಿದ್ದು ಆರೋಪಿತನು ಅಲ್ಲೇ ಇದ್ದರೂ ಸಹ ಆರೋಪಿತನ ಅಪಘಾತದ ಕುರಿತು ಪೊಲೀಸರಿಗಾಗಲೇ, ಅಥವಾ ಪ್ರಾಸಾ-1ರವರಿಗಾಗಲೀ ಏಕೆ ತಿಳಿಸಲಿಲ್ಲ ಎಂಬುದಕ್ಕೆ ಸಂಭಂ ದಿಸಿದಂತೆ ಸಂಶಯ ಉಂಟಾಗುತ್ತದೆ. ಮತ್ತು ಇವರ ಸಾಕ್ಷ್ಯದಲ್ಲಿ ತುಂಬಾ ವಿರೋದೋಕ್ತಿಗಳು ಕಂಡುಬಂದಿರುತ್ತವೆ. ಆದ್ದರಿಂದ ಆರೋಪಿತನ ತಪ್ಪಿನಿಂದಲೇ ಅಪಘಾತ ಸಂಭವಿಸಿರುತ್ತದೆ ಎಂದು ನಂಬುವಲ್ಲಿ ಸಂಶಯ ಉಂಟಾಗುತ್ತದೆ.

22. ಪ್ರಾಸಾ-2 ರವರು ಶವಪಂಚ ಮತ್ತು ಜಪ್ತಿ ಪಂಚ ಇದ್ದು, ಇತನು ತನ್ನ ಸಾಕ್ಷ್ಯದಲ್ಲಿ, ತನ್ನ ಸಮಕ್ಷಮ ಜಪ್ತಿ ಪಡಿಸಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. ಇವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದು, ಪೊಲೀಸ ಠಾಣೆಯಲ್ಲಿ ತನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ತನಗೆ ಚಾಸಾ-3 ರವರ ಪರಿಚಯವಿದ್ದು, ಅವರು ತನ್ನ ದೂರದ

ಸಂಬಂಧಿಗಳು ಇರುತ್ತಾರೆ ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ಚಾಸಾ-3 ರವರು ಈ ಕೇಸನ್ನು ಬಿಟ್ಟು ಬೇರೆ ಕೇಸಿನಲ್ಲಿ ಸಾಕ್ಷಿಯಾಗಿದ್ದಾರೆ ಎಂಬುವುದನ್ನು ಒಪ್ಪಿಕೊಂಡಿರುತ್ತಾರೆ. ಘಟನಾ ಸ್ಥಳವನ್ನು ಪೊಲೀಸರು ತೋರಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇತನು ತನ್ನ ಸಮಕ್ಷಮ ವಾಹನವನ್ನು ಜಪ್ತಿ ಪಡಿಸಿಕೊಂಡಿರುವುದನ್ನು ಮತ್ತು ಮೃತನ ಶವಪಂಚನಾಮೆ ಮಾಡಿರುವುದನ್ನು ಒಪ್ಪಿಕೊಂಡಿರುತ್ತಾನೆ. ಆದರೇ, ಇತನು ಈ ಪ್ರಕರಣವನ್ನು ಬಿಟ್ಟು ಇನ್ನೊಂದು ಪ್ರಕರಣದಲ್ಲಿ ಪಂಚನಾಗಿರುವುದನ್ನು ಒಪ್ಪಿಕೊಂಡಿರುತ್ತಾನೆ.

23. ಪ್ರಾಸಾ-3 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದ್ದು, ಪಾಟೀಸವಾಲಿನಲ್ಲಿ, ತಮಗೆ ಅನುಕೂಲವಾಗುವ ಯಾವುದೇ ಉತ್ತರವನ್ನಾಗಲೀ ಒಪ್ಪಿಗೆಯನ್ನಾಗಲೀ ಪಡೆದಿರುವುದಿಲ್ಲ.

24. ಪ್ರಾಸಾ-4 ರವರು ಇವರು ಪ್ರಾಸಾ-1 ರವರೊಂದಿಗೆ ಘಟನಾ ಜಾಗಕ್ಕೆ ಹೋದ ಸಾಕ್ಷಿ ಇದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಅಪಘಾತ ನಡೆದ ದಿನದಂದು ಸ್ಥಳದಲ್ಲಿಯೇ ಮೋಟಾರ ಸೈಕಲ್ ಮತ್ತು ಟಂಟಂ ವಾಹನ ಇತ್ತು, ಆ ಕುರಿತು ತಾನು ಹೇಳಿಕೆಯನ್ನು ನೀಡಿರುವುದಾಗಿ ಮತ್ತು ಠಾಣೆಯಲ್ಲಿ ಆರೋಪಿತನನ್ನು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಇವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದ್ದು, ಪಾಟೀಸವಾಲಿನಲ್ಲಿ ತನಗೆ ಪ್ರಾಸಾ-1 ಮತ್ತು 3 ರವರು ದೂರದ ಸಂಬಧೀಕರು ಆಗಬೇಕು ಎನ್ನುವುದನ್ನು ಒಪ್ಪಿಕೊಂಡಿರುತ್ತಾರೆ. ಅಪಘಾತದ ಸ್ಥಳದಲ್ಲಿ 10 ರಿಂದ 15 ನಿಮಿಷ ಇದ್ದು, ಆ ಸಮಯದಲ್ಲಿ ಒಬ್ಬ ಚಂದ್ರಕಾಂತ ಎನ್ನುವವರು ಇದ್ದರು ಎಂದು ನುಡಿದಿರುತ್ತಾರೆ. ಇವರು ಹೇಳುವಂತೆ ಮೃತ ಶ್ರೀಕಾಂತನಿಗೆ ಅಪಘಾತವಾಗಿದೆ ಅಂತಾ ಚಾಸಾ-1 ರವರು ತನಗೆ ತಿಳಿಸಿರುವುದಾಗಿ ಅಪಘಾತದ ಕುರಿತು ಯಾರೋ ಪೋನ ಮಾಡಿರುವುದಾಗಿ, ನುಡಿದಿರುತ್ತಾರೆ. ಮತ್ತು ತಾವು ಘಟನಾ ಜಾಗಕ್ಕೆ ಹೋಗಿದ್ದಾಗಿ ನುಡಿದಿರುತ್ತಾರೆ. ಘಟನೆ ನಡೆದ ಸ್ಥಳದಲ್ಲಿ ತಮಗೆ ಪೋನ ಮಾಡಿದ ವ್ಯಕ್ತಿಯು ಇದ್ದು ಆ ಕುರಿತು ಅವರ ಬಳಿ

ಮಾತನಾಡಿರುವುದಾಗಿ ತಿಳಿಸಿರುತ್ತಾರೆ. ಆ ಸಂಧರ್ಭದಲ್ಲಿ ಪೋನ ಮಾಡಿರುವ ವ್ಯಕ್ತಿ ಪ್ರಾಸಾ-5 ರವರಿದ್ದು, ಅವರ ಬಳಿ ಅಪಘಾತದ ಬಗ್ಗೆ ವಿಚಾರಿಸಿರುವುದಾಗಿ ನುಡಿದಿರುವುದಿಲ್ಲ. ಪ್ರಾಸಾ-5 ರವರು ಹೇಳುವಂತೆ ಅಪಘಾತದ ಸಂದರ್ಭದಲ್ಲಿ ಶವವನ್ನು ಒಯ್ಯುವವರೆಗೂ ಆರೋಪಿಯು ಅಲ್ಲಿಯೇ ಹಾಜರಿದ್ದನು ಎಂದು ನುಡಿದಿರುತ್ತಾರೆ. ಒಂದು ವೇಳೆ ಆತನು ಅಲ್ಲಿ ಹಾಜರಿದ್ದರೇ, ಅವರನ್ನು ಈ ಉಳಿದ ಸಾಕ್ಷಿದಾರರಿಗೆ ತೋರಿಸಬಹುದಿತ್ತು ಅಥವಾ ಇದರ ಕುರಿತು ಹೇಳಬಹು ದಿತ್ತು. ಆದರೇ, ಸ್ಥಳದಲ್ಲಿ ಯಾವುದೇ ವ್ಯಕ್ತಿಯನ್ನು ತೋರಿಸಿರುವುದಿಲ್ಲ. ಮತ್ತು ನೋಡಿರುವುದಾಗಿ ಇವರು ನುಡಿದಿರುವುದಿಲ್ಲ.

25. ಪ್ರಾಸಾ-5 ರವರು ಈ ಪ್ರಕರಣದಲ್ಲಿ, ಪ್ರತ್ಯಕ್ಷ ಸಾಕ್ಷಿ ಇದ್ದು, ಇವರು ಮುಖ್ಯ ವಿಚಾರಣೆಯಲ್ಲಿ, ಅಭಿಯೋಜನೆ ಪರವಾಗಿ ಸಾಕ್ಷಿ ನುಡಿದಿದ್ದು, ಆದರೆ ಪಾಟೀಸವಾಲಿನಲ್ಲಿ, ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುತ್ತಾರೆ. ಇವರು ಹೇಳುವಂತೆ ಒಂದು ವೇಳೆ ಆರೋಪಿತನ ತಪ್ಪಿನಿಂದಲೇ ಅಪಘಾತ ನಡೆದಿದ್ದರೇ ಆತನು ಅಲ್ಲಿ ಹಾಜರಿದ್ದರೇ, ಆತನ ಕುರಿತು ಮೃತನ ಸಂಬಂಧೀಕರಿಗೆ ಅಥವಾ ಅಲ್ಲಿಗೆ ಬಂದ ಪೊಲೀಸರಿಗೆ ವಿಷಯ ತಿಳಿಸಬಹುದಿತ್ತು, ಆದರೇ ಇತನು ಯಾವುದೇ ವಿಷಯವನ್ನು ತಿಳಿಸಿರುವುದಿಲ್ಲ. ಆದ್ದರಿಂದ ಇತನ ಸಾಕ್ಷ್ಯದ ಮೇಲೆ ಸಂಶಯ ಉಂಟಾಗುತ್ತದೆ. ಹಾಗೂ ವಿರೋದೋಕ್ತಿ ಕಂಡುಬರುತ್ತದೆ.

26. ಪ್ರಾಸಾ-8 ಇವರು ಪ್ರಕರಣವನ್ನು ದಾಖಲಿಸಿಕೊಂಡ ತನಿಖಾಧಿಕಾರಿ ಇದ್ದು, ಇವರು ಘಟನಾ ಜಾಗೆಗೆ ಹೋಗಿ ಮೃತನ ತಂದೆಯವರ ಹೇಳಿಕೆ ಪಿರ್ಯಾದಿಯನ್ನು ಪಡೆದುಕೊಂಡು ಠಾಣೆಗೆ ಬಂದು ಪ್ರಕರಣ ದಾಖಲಿಸಿಕೊಂಡಿದ್ದೇನೆಂದು ನುಡಿದಿರುತ್ತಾರೆ. ಅಂದರೇ ಇವರು ಘಟನಾ ಜಾಗೆಯಲ್ಲಿ ಘಟನೇ ನಡೆದ ನಂತರ ಭೇಟಿ ನೀಡಿದರು ಎಂದು ತಿಳಿದು ಬರುತ್ತದೆ. ಇವರು ಘಟನಾ ಜಾಗೆಗೆ ಹೋದಾಗ, ಘಟನಾ ಜಾಗದಲ್ಲಿ, ಹಾಜರಿದ್ದ ಯಾವುದೇ ವ್ಯಕ್ತಿಗಳ ಹೇಳಿಕೆಯನ್ನು ಪಡೆದಿರುವುದಿಲ್ಲ, ಮತ್ತು ಘಟನೆ ಯಾರ ತಪ್ಪಿನಿಂದ ಆಗಿರುತ್ತದೆ ಎಂಬುವುದಕ್ಕೆ

ಸಂಬಂಧಪಟ್ಟಂತೆ ಅಲ್ಲಿ ಹಾಜರಿದ್ದ ವ್ಯಕ್ತಿಗಳ ಬಳಿ ಪರಿಶೀಲನೆ ಮಾಡಿರುವುದಿಲ್ಲ. ಪ್ರಾಸಾ-5 ರವರು ತಾನು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಾಗಿ ಹೇಳಿದ್ದು, ಒಂದು ವೇಳೆ ಅವರು ಘಟನೆಯನ್ನು ನೋಡಿದ್ದರೇ, ಪೊಲೀಸಿನವರು ಘಟನಾ ಜಾಗಕ್ಕೆ ಹೋದಾಗ, ಆರೋಪಿತನ ಕುರಿತು ಮಾಹಿತಿ ನೀಡಬಹುದಿತ್ತು, ಮತ್ತು ಒಂದು ವೇಳೆ ಆತನು ಘಟನೆಯ ಕುರಿತು ನುಡಿ ದಿದ್ದರೇ, ಆ ಸಂದರ್ಭದಲ್ಲಿಯೇ ಆರೋಪಿತನನ್ನು ಘಟನೆಯ ಕುರಿತು ವಿಚಾರ ಮಾಡುತ್ತಿದ್ದರು. ಆದರೇ, ಇಲ್ಲಿ ಈ ಸಾಕ್ಷಿಯು ಆರೋಪಿತನ ಕುರಿತು ಹೇಳಿರುವುದರ ಬಗ್ಗೆ ಯಾವುದೇ ಅಂಶಗಳನ್ನು ನುಡಿದಿರುವುದಿಲ್ಲ.

27. ಪ್ರಾಸಾ-60 ಇವರು ಶವ ಪಂಚನಾಮೆ ಮಾಡಿರುವುದಾಗಿ, ಮತ್ತು ವಾಹನಗಳನ್ನು ಜಪ್ತಿಪಡಿಸಿಕೊಂಡಿರುವುದಾಗಿ ಮತ್ತು ಆರ್‌ಟಿಓ ರವರಿಗೆ ವಾಹನ ಪರೀಶಿಲನಾ ವರದಿ ನೀಡುವುದರ ಸಂಬಂಧ ನುಡಿದಿರುತ್ತಾರೆ. ಗುನ್ನೆ ಸ್ಥಳದ ಪಂಚರು ಅಕ್ಕಪಕ್ಕದ ಇರುವುದಿಲ್ಲ, ಮತ್ತು ಸಮೀಪದ ಸ್ಥಳದವರು ಇರುವುದಿಲ್ಲ ಎಂಬುವುದನ್ನು ಒಪ್ಪಿಕೊಂಡಿರುತ್ತಾರೆ.

28. ಇವರು ವಾಹನ ಪರಿಶೀಲನೆ ಮಾಡಿ ಅದರ ವರದಿ ನೀಡಿದ ಸಾಕ್ಷಿ ಇರುತ್ತಾರೆ. ಪ್ರಾಸಾ-6 ರವರು ಹೇಳುವಂತೆ ಚಾಸಾ-2 ಮತ್ತು 4 ರವರು ಬೇರೆ ಬೇರೆ ಗ್ರಾಮದವರು ಇರುತ್ತಾರೆ ಎಂಬುವುದನ್ನು ಒಪ್ಪಿಕೊಂಡಿರುತ್ತಾರೆ. ಅಂದರೇ ಇದರಲ್ಲಿ ಯಾವುದೇ ಸ್ಥಳೀಯ ಸಾಕ್ಷಿಗಳನ್ನು ಪಂಚರನ್ನಾಗಿ ಮಾಡಿಕೊಂಡಿರುವುದಿಲ್ಲ ಎಂಬುವುದನ್ನು ಒಪ್ಪಿಕೊಂಡಿರುತ್ತಾರೆ.

29. ಪ್ರಕರಣದಲ್ಲಿಯ ದಾಖಲೆಗಳನ್ನು ಮತ್ತು ಸಾಕ್ಷಿದಾರರ ಸಾಕ್ಷ್ಯಗಳನ್ನು ಪರೀಶೀಲಿಸಲಾಗಿ ಆರೋಪಿಸಿದ ದಿನಾಂಕ, ವೇಳೆ ಮತ್ತು ಅಪಘಾತವಾದ ಸ್ಥಳದ ಬಗ್ಗೆ ಯಾವುದೇ ವಿವಾದವಿರುವು ದಿಲ್ಲ, ಪ್ರಾಸಾ-1 ಇತನು ಪಿರ್ಯಾದಿ ಇದ್ದು, ಇತನು ಕೇಳಿ ಹೇಳಿದ ಸಾಕ್ಷಿ ಇದ್ದು, ಘಟನೆಯ ನಂತರ ಘಟನಾ ಜಾಗಕ್ಕೆ ಬಂದ ಸಾಕ್ಷಿ ಇರುತ್ತಾರೆ. ಪ್ರಾಸಾ-2 ಇವರು ಗುನ್ನಾ ಜಾಗೆಯ ಪಂಚ,

ಜಪ್ತಿ ಮತ್ತು ಶವ ಪಂಚನಾಮೆಯ ಸಾಕ್ಷಿದಾರನಿದ್ದು, ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ. ಅದಲ್ಲದೆ ಈ ಪ್ರಕರಣದಲ್ಲಿ ಮೃತ ಶ್ರೀಕಾಂತ ತೀರಿಕೊಂಡ ಬಗ್ಗೆ ಆರೋಪಿ ಅಷ್ಟು ಗಂಬೀರವಾಗಿ ವಿವಾದಿಸಿರುವುದಿಲ್ಲ.

30. ಅಪಘಾತದ ಪ್ರಕರಣಗಳಲ್ಲಿ ಸಾಕ್ಷಿದಾರರ ಸಾಕ್ಷ್ಯವನ್ನು ಪರಿಗಣಿಸುವುದಕ್ಕಿಂತ ಮೊದಲೇ ಆರೋಪಿತನ ತಪ್ಪಿನಿಂದಲೇ ಈ ಅಪಘಾತವಾಗಿದೆ ಎಂದು ಅವರ ಅಭಿಪ್ರಾಯಕ್ಕೆ ತಕ್ಕಂತೆ ನಿರ್ಣಯಕ್ಕೆ ಬರಲು ಸಾಧ್ಯವಾಗುವುದಿಲ್ಲ, ಪ್ರಕರಣದ ಸಂಗತಿ ಮತ್ತು ಸಂಧರ್ಭಗಳ ಆಧಾರದ ಮೇಲಿಂದ ನ್ಯಾಯಾಲಯ ಆ ಸನ್ನಿವೇಶದಲ್ಲಿ, ವಾಹನದ ಚಾಲಕರ ಸಾಮಾನ್ಯ ವಿವೇಕ ಚಾಲಕರು ಎಷ್ಟು ಮುಂಜಾಗ್ರತೆ ವಹಿಸಬೇಕಾಗಿತ್ತೋ ಅಷ್ಟು ಮುಂಜಾಗ್ರತೆ ವಹಿಸಿದ್ದಾರೋ ಅಥವಾ ಇಲ್ಲವೋ ಎನ್ನುವದನ್ನು ನೋಡಿ ನ್ಯಾಯಾಲಯ ತೀರ್ಮಾನಿಸಬೇಕಾಗುತ್ತದೆ. ಯಾವುದು ಸರಿ ಅಥವಾ ತಪ್ಪು ಎನ್ನುವದನ್ನು ಸಾಕ್ಷಿದಾರರು ಹೇಳಬೇಕಾಗಿಲ್ಲ, ಆ ಕೃತ್ಯ ಅಜಾಗರೂಕತೆಯಿಂದ ಅಥವಾ ದುಡುಕುತನದಿಂದ ಕೂಡಿದೆಯೋ ಅಥವಾ ಇಲ್ಲವೋ ಎನ್ನುವ ಸಂಗತಿಯನ್ನು ಪ್ರಕರಣದ ಸಂಗತಿ ಮತ್ತು ಸಂಧರ್ಭಗಳ ಆಧಾರದ ಮೇಲಿಂದ ಊಹಿಸಬೇಕಾಗುತ್ತದೆ.

31. ಅಪಘಾತದ ಸ್ಥಳ ಸಾರ್ವಜನಿಕ ರಸ್ತೆ ಮತ್ತು ರಾಷ್ಟ್ರೀಯ ಹೆದ್ದಾರಿ ಎಂಬ ಬಗ್ಗೆ ಯಾವುದೇ ವಿವಾದವಿರುವುದಿಲ್ಲ, ಒಂದು ಕೃತ್ಯ ಅಜಾಗರೂಕತೆಯಿಂದ ಮತ್ತು ನಿರ್ಲಕ್ಷತನದಿಂದ ನಡೆದಿದೆಯೇ ಅಥವಾ ಇಲ್ಲವೊ ಎನ್ನುವದನ್ನು ನೋಡಬೇಕಾದರೆ, ಅಪಘಾತದ ಸಮಯದಲ್ಲಿ, ವಾಹನದ ವೇಗ, ಅಪಘಾತದ ಸಮಯ, ರಸ್ತೆಯ ಸ್ಥಿತಿಗತಿ, ಜನಸಂಧಣಿ, ರಸ್ತೆಯ ಅಗಲ, ವಾಹನ ಸಂಚಾರ ಆ ಸನ್ನಿವೇಶದಲ್ಲಿ ವಾಹನ ಚಲಿಸಿದ ರೀತಿ ಇವೆಲ್ಲವೂಗಳನ್ನು ಗಮನಿಸಬೇಕಾಗುತ್ತದೆ.

32. ಪಿರ್ಯಾದಿದಾರರು ಮತ್ತು ಕೇಳಿ ಹೇಳಿದ ಸಾಕ್ಷಿದಾರರು ಆಗಿದ್ದಾರೆ. ನಿಶಾನೆ.ಪಿ-1ರಲ್ಲಿ ಹೀಗಿದ್ದು " ಇಂದು ದಿನಾಂಕಃ 19-03-2013 ರಂದು ರಾತ್ರಿ 09-50 ಗಂಟೆಯ ಸುಮಾರಿಗೆ ಮನೆಯಲ್ಲಿದ್ದಾಗ, ಯಾರೋ ತನ್ನ ಮಗ ಶ್ರೀಕಾಂತ ನ ಮೊಬೈಲ್ ನಂ. 9741860361 ನೇದ್ದರಿಂದ ನನ್ನ ಮೊಬೈಲ್ ನಂಬರ 9611471963 ನೇದ್ದಕ್ಕೆ ಪೋನ ಮಾಡಿ ನನಗೆ ವಿಚಾರಿಸಿದ್ದೇನೇಂದರೇ ಈ ನಂಬರ ಯಾರದು ಎಂದು ಕೇಳಲಾಗಿ ನನ್ನ ಮಗ ಶ್ರೀಕಾಂತನದು ಇರುತ್ತದೆ ಎಂದು ಹೇಳಿದ್ದು, ಅವರು ಹೇಳಿದ್ದೇನೆಂದರೇ ಅಳಗೋಡ ಕ್ರಾಸ ದಾಟಿ ಅಳ್ಳಿ ಹಳ್ಳ ಬ್ರಿಡ್ಜ್ ಹತ್ತಿರ ನಿಮ್ಮ ಮಗನ ಎಕ್ಸಿಡೆಂಟ ಆಗಿದೆ ಅವನು ಸ್ಥಳದಲ್ಲಿ ಮೃತಪಟ್ಟಿರುತ್ತಾನೆ ಎಂದು ತಿಳಿಸಿದರು. ಹೇಗಾಗಿದೆ ಎಂದು ಕೇಳಲಾಗಿ, ನಿಮ್ಮ ಮಗ ತನ್ನ ಹಿರೋಹೊಂಡಾ ಮೊಟಾರ ಸೈಕಲ್ ಮೇಲೆ ಹುಮನಾಬಾದ ಕಡೆಯಿಂದ ಗುಲಬರ್ಗಾ ಕಡೆ ಹೊರಟಿದ್ದು, ಎದುರಿನಿಂದ ಅಂದರೆ ಗುಲಬರ್ಗಾ ಕಡೆಯಿಂದ ಒಂದು ನೀಲಿ ಬಣ್ಣದ ಟಂಟಂ ಕೆಎ-09-ಎ-5614 ಚಾಲಕ ಟಂಟಂನ್ನು ಅತೀವೇಗ ಮತ್ತು ನಿಷ್ಕಾಳಜಿತನದಿಂದ ನಡೆಸುತ್ತಾ ತನ್ನ ಸೈಡಿಗೆ ಹೋಗದೇ ನಿಮ್ಮ ಮಗನ ಸೈಡಿಗೆ ಬಂದು ಡಿಕ್ಕಿ ಹೊಡೆದಿದ್ದರಿಂದ ನಿಮ್ಮ ಮಗನ ಬಲಗಣ್ಣಿಗೆನ ಹತ್ತಿರಭಾರಿ ರಕ್ತಗಾಯವಾಗಿ ರಕ್ತಸ್ರಾವದಿಂದ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ. ಟಂಟಂ ಚಾಲಕ ನಿಲ್ಲಿಸಿ ಓಡಿಹೋಗಿರುತ್ತಾನೆ ಎಂದು ತಿಳಿಸಿದರು. ಅವರ ಹೆಸರು ವಿಚಾರಿಸಲಾಗಿ, ಅವರು ತಮ್ಮ ಹೆಸರು ಚೆನ್ನವೀರ ಸಲಗರ ತಾಲ್ಲೂಕ ಪಂಚಾಯತಿ ಅದ್ಯಕ್ಷ ಕುರಿಕೋಟಾ ಅಂತಾ ತಿಳಿಸಿದರು. ಈ ವಿಷಯ ಕೇಳಿ ಗಾಬರಿಗೊಂಡು ಕೂಡಲೇ 108 ಗಾಡಿಗೆ ಪೋನ ಮಾಡಿ ವಿಷಯ ತಿಳಿಸಿದ್ದು, ನಾನು ಮತ್ತು ದೂರದ ಸಂಬಂಧಿ ಬಸವರಾಜ ಇಬ್ಬರೂ ಕೂಡಿ ಬಸವರಾಜನ ಮೊಟಾರ ಸೈಕಲ್ ಮೇಲೆ ಘಟನಾ ಜಾಗಕ್ಕೆ ಬಂದು ನೋಡಲಾಗಿ ಶ್ರೀಕಾಂತನು ರೋಡಿನ ಮೇಲೆ ಬಿ ದ್ದಿದ್ದು, ನೋಡಲಾಗಿ ಅವನ ಬಲಗಣ್ಣಿನ ಹುಬ್ಬಿನ ಮೇಲೆ ಭಾರಿ ರಕ್ತಗಾಯವಾಗಿದ್ದು, ಅಲ್ಲದೇ ಬಲಗೈ ಭುಜದ ಹತ್ತಿರ ಭಾರಿ ಗುಪ್ತಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ನೋಡಿದನು. 108 ಗಾಡಿಯವರು ಸ್ಥಳಕ್ಕೆ ಬಂದಿದ್ದು ಅದರಲ್ಲಿಯೇ ಸಿಬ್ಬಂದಿಯವರು ನಮ್ಮ ಮಗ ಮೃತಪಟ್ಟಿದ್ದರಿಂದ 108 ಸಿಬ್ಬಂದಿಯವರು ಮೃತನ ದೇಹವನ್ನು ತೆಗೆದುಕೊಂಡು ಹೋಗುವುದಿಲ್ಲ

ಎಂದು ಹೇಳಿದ್ದರಿಂದ ಮೃತ ದೇಹ ತೆಗೆದುಕೊಂಡು ಹೋಗಿರುವುದಿಲ್ಲ. ನನ್ನ ಮಗನಿಗೆ ಡಿಕ್ಕಿ ಹೊಡೆದ ಟಂಟಂ ಗಾಡಿ ಸ್ಥಳದಲ್ಲಿಯೇ ನಿಂತಿದ್ದು ಅದು ನೀಲಿ ಬಣ್ಣದ್ದು ಇದ್ದು ಅದರ ಮೇಲೆ ಕೆಎ-09-ಎ-5614 ಅಂತಾ ನಂಬರ ಬರೆದಿದ್ದು ಇತ್ತು. ನನ್ನ ಮಗನ ಮೋಟಾರ ಸೈಕಲ್ ನಂ ಕೆಎ-32-ಆರ್-2901 ನೋಡಲಾಗಿ ಅದರ ಮುಂಭಾಗದ ಬಂಪರ ಹೆಡ್‌ಲೈಟ್ ಮತ್ತು ಹೆಡ್‌ಲೈಟಿನ ಕೆಳಗಡೆ ಹಾಗೂ ಎಡಭಾಗದ ಬಂಪರ ಡ್ಯಾಮೇಜ ಆಗಿದ್ದು ಇರುತ್ತದೆ. ಈಘಟನೆ ನಡೆದಾಗ ರಾತ್ರಿ 09-30 ಗಂಟೆ ಸಮಯ ಆಗಿರಬಹುದು. ಕಾರಣ ನನ್ನ ಮಗ ಶ್ರೀಕಾಂತ ಮೋಟಾರ ಸೈಕಲ್‌ಗೆ ಅತೀವೇಗ ಮತ್ತು ನಿಶ್ಕಾಳಜೀತನದಿಂದ ನಡೆಸುತ್ತಾ ಬಂದು ಡಿಕ್ಕಿ ಹೊಡೆದ ಟಂಟಂ ಕೆಎ-09-ಎ-5614ರ ಚಾಲಕನ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು" ಎಂದು ಹೇಳಿಕೆ ಪಿರ್ಯಾದಿ ಸಲ್ಲಿಸಿರುತ್ತಾರೆ. ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ನಿಶಾನೆ.ಪಿ-1ಕ್ಕೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ-2 ಇವರು ಗುನ್ನಾ ಜಾಗೆಯ ಪಂಚ, ಜಪ್ತಿ ಮತ್ತು ಶವ ಪಂಚನಿದ್ದು, ಇವರು ಅಭಿಯೋಜನೆಯ ಪರವಾಗಿ ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ-1 ರವರು ನಿಶಾನೆ.ಪಿ-1 ರಂತೆ ಸಾಕ್ಷಿ ನುಡಿದಿದ್ದು, ಪ್ರಾಸಾ-5 ರವರು ಅಪಘಾತವು ಆರೋಪಿತನ ತಪ್ಪಿನಿಂದ ನಡೆದಿರುತ್ತದೆ ಎಂಬುವುದಕ್ಕೆ ಮತ್ತು ಆರೋಪಿತನ ಹೆಸರು ಇವುಗಳ ಬಗ್ಗೆ ಮತ್ತು ಘಟನೆ ನಡೆದ ಬಗ್ಗೆ ಆರೋಪಿತನು ಅಲ್ಲಿಂದ ಓಡಿ ಹೋಗಿರುವುದರ ಬಗ್ಗೆ ತಿಳಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಆದರೇ ಪ್ರಾಸಾ-1 ರವರು ತನಗೆ ಪ್ರಾಸಾ-5 ರವರು ಪೋನ ಮಾಡಿ ಆರೋಪಿತನ ತಪ್ಪಿನಿಂದಲೇ ಅಪಘಾತ ನಡೆದಿದ್ದು, ಆತನು ಸ್ಥಳದಿಂದ ಓಡಿಹೋಗಿರುತ್ತಾನೆಂದು ನುಡಿದಿರತ್ತಾರೆ. ಇವರಿಬ್ಬರ ಸಾಕ್ಷ್ಯವನ್ನು ಪರಿಶೀಲಿಸಿದಾಗ, ಸಾಕಷ್ಟು ವಿರೋದೋಕ್ತಿಗಳು ಕಂಡು ಬರುತ್ತವೆ.

33. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ತಮ್ಮ ವಾದವನ್ನು ಮಂಡಿಸುತ್ತಾ, ಆರೋಪಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂಃ 313ರಡಿಯಲ್ಲಿ ಆತನನ್ನು ಪರೀಕ್ಷಿಸಿದಾಗ ಅಪಘಾತ ಯಾವ ರೀತಿ ಆಯಿತೆಂಬ ಬಗ್ಗೆ ವಿವರಣೆ ನೀಡಿರುವುದಿಲ್ಲ. ಆತನಿಗೆ ಕೊಟ್ಟ

ಅವಕಾಶದ ಸದುಪಯೋಗ ಪಡೆದುಕೊಂಡಿರುವುದಿಲ್ಲ. ಅಪಘಾತಕ್ಕೆ ಕಾರಣ ಏನು ಎನ್ನುವುದು ಆತನಿಗೆ ಮಾತ್ರ ಹೆಚ್ಚು ಗೊತ್ತಿರುತ್ತದೆ ವಿನಃ ಬೇರೆಯವರಿಗೆ ಗೊತ್ತಿರುವ ಸಾಧ್ಯತೆ ಇಲ್ಲ. ಹೀಗಿರುವಾಗ ಆ ಘಟನೆಗೆ ಸಂಬಂಧಪಟ್ಟ ವಿಶೇಷ ಮಾಹಿತಿ ಆಯಾ ವಾಹನದ ಚಾಲಕನಿಗೆ ಮಾತ್ರ ಗೊತ್ತಿರುತ್ತದೆ. ಮತ್ತು ಅದಕ್ಕಾಗಿ ಅದನ್ನು ಆತನೇ ವಿವರಿಸಬೇಕಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಆರೋಪಿ ಆ ಬಗ್ಗೆ ವಿವರಣೆ ನೀಡಿರುವುದಿಲ್ಲ. ವಿವರಣೆ ಕೊಡದೆ ಇರುವುದಕ್ಕೆ ಯಾವುದೇ ಕಾರಣ ಕೂಡ ನೀಡಿರುವುದಿಲ್ಲ. ಆರೋಪಿ ಭಾರತ ದಂಡ ಸಂಹಿತೆಯ ಕಲಂ 313ರಡಿಯಲ್ಲಿ ಕೊಟ್ಟ ಹೇಳಿಕೆ ಮಹತ್ವದ್ದಾಗಿರುತ್ತದೆ. ಆದರೆ ದುರಾದೃಷ್ಟವಾಗಿ ಈ ಪ್ರಕರಣದಲ್ಲಿ ಆರೋಪಿ ತನ್ನ ಹೇಳಿಕೆಯನ್ನು ನೀಡಿರುವುದಿಲ್ಲ. ಹೀಗಿರುವಾಗ ಆತನ ಕೇಸಿನ ವಿರುದ್ದ ಪ್ರತಿಕೂಲ ಪೂರ್ವಭಾವನೆ ಮಾಡಬೇಕಾಗುತ್ತದೆ. ಅಂದರೆ ಪ್ರತಿರಕ್ಷೆಯಲ್ಲಿ ಹೇಳಿಕೊಂಡಂತ ಪ್ರಶ್ನೆಗಳು ಸತ್ಯಕ್ಕೆ ದೂರವಾಗಿವೆ ಎಂದು ಊಹಿಸಬೇಕಾಗುತ್ತದೆ. ಎಲ್ಲಿ ನಿಜವಾದ ಸಂಗತಿ ಹೇಳಬೇಕಾಗುತ್ತದೆಯೇ ಎಂಬ ಉದ್ದೇಶಕ್ಕಾಗಿ ಆರೋಪಿಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ರಡಿಯಲ್ಲಿ ಪರೀಕ್ಷಿಸಿದಾಗ ಯಾವುದೇ ಉತ್ತರ ಕೊಡದೆ ಸುಳ್ಳು ಎಂದು ಉತ್ತರಿಸಿದ್ದಾನೆಂದು ಊಹಿಸ ಬೇಕಾಗುತ್ತದೆಂದು ವಾದ ಮಂಡಿಸಿತ್ತಾ 1997 ಕ್ರಿಮಿನಲ್ ಲಾ ಜರ್ನಲ್ 1109 ಮತ್ತು 2006 1 ಕ್ರೈಂ 201 ಎಸ್‌ಸಿ ಎಂಬ ಆದೇಶವನ್ನು ಹಾಜರುಮಾಡಿರುತ್ತಾರೆ.

34. ಅಭಿಯೋಜನೆಯ ಪರವಾಗಿ ಮಾಡಿಸಿದಂತಹ ಸಾಕ್ಷಿದಾರರೆಲ್ಲರ ಸಾಕ್ಷಿಯನ್ನು ಪರಿಶೀಲಿಸಿದಾಗ, ಅವರ ಸಾಕ್ಷ್ಯದಲ್ಲಿ ವಿರೋಧೋಕ್ತಿಗಳು ಕಂಡು ಬಂದಿರುತ್ತವೆ. ಆದ್ದರಿಂದ ಸದರಿ ಅಪಘಾತವು ಆರೋಪಿತನ ತಪ್ಪಿನಿಂದಲೇ ನಡೆದಿರುತ್ತದೆ ಎಂದು ಅಭಿಯೋಜನೆಯವರು ಯಾವುದೇ ಪ್ರತ್ಯಕ್ಷ ಮತ್ತು ಪರೋಕ್ಷ ಸಾಕ್ಷಿದಾರರನ್ನು ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ಈ ಅಪಘಾತವು ಆರೋಪಿತನ ತಪ್ಪಿನಿಂದಲೇ ಸಂಭವಿಸಿದೆ ಎಂದು ಸಂಶಯಾಸ್ಪದವಾಗಿ ಕಂಡುಬರದೇ ಇರುವುದರಿಂದ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಿ *ಅಂಶ ನಂ.1 ರಿಂದ 3* ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

35. ಅಂಶ ನಂ.4ಃ ಮೇಲ್ಕಂಡಂತೆ ಚರ್ಚಿಸಿದ್ದರ ಫಲವಾಗಿ ಕೊನೆ ಆದೇಶವನ್ನು ಈ ಕೆಳಕಂಡಂತೆ ಮಾಡಿರುತ್ತೇನೆ.

ಆಜ್ಞೆ

*ದಂ.ಪ್ರ. ಸಂ. ಕಲಂ.255(1) ರ ಮೇರೆಗೆ ವರ್ತಿಸುತ್ತಾ ಆರೋಪಿತನನ್ನು ಭಾರತ ದಂಡ ಸಂಹಿತೆ ಕಲಂಃ 279 ಮತ್ತು 304(ಎ) ಮತ್ತು ಕಲಂಃ187 ಐಎಂವಿ ಆ್ಯಕ್ಟ ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಆರೋಪಗಳಿಂದ ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.*

*ಆರೋಪಿತನ ಜಾಮೀನು ಮುಚ್ಚಳಿಕೆಯನ್ನು ಅಪೀಲ ಅವಧಿ ಮುಗಿದ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.*

*ಈ ಪ್ರಕರಣದಲ್ಲಿ ಜಪ್ತಿ ಮಾಡಲಾದ ವಾಹನ ನಂ. ಕೆಎ-32-ಆರ್-2901 ನೇದ್ದನ್ನು ಅಪೀಲ ಅವಧಿ ಮುಗಿದ ನಂತರ ಹರಾಜು ಮಾಡಿ ಬಂದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಲು ಆದೇಶಿಸಲಾಗಿದೆ.*

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲು ಹೇಳಿ, ನಂತರ ಓದಿ, ಸೂಕ್ತ ತಿದ್ದುಪಡಿ ಮಾಡಿ ಇಂದು ದಿನಾಂಕ 15-12-2015 ರಂದು ಬಹಿರಂಗ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು)

(ಸೌಭಾಗ್ಯ ಭೂಸೇರ)
*5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು*
*ಜೆ.ಎಂ.ಎಫ್.ಸಿ. ಕಲಬುರಗಿ*

ಅನುಬಂಧ

1) *ಅಭಿಯೋಜನೆ ಪರವಾಗಿ ಪರೀಕ್ಷಿಸಿದ ಸಾಕ್ಷಿಗಳ ಯಾದಿಃ*

ಪ್ರಾ.ಸಾ.1ಃ ಅಣ್ಣೆಪ್ಪ ತಂದೆಃ ಹಣಮಂತ
ಪ್ರಾ.ಸಾ.2ಃ ರಾಜೇಂದ್ರ ತಂದೆಃ ನರಸಿಂಹರಾವ
ಪ್ರಾ.ಸಾ.3ಃ ಅನೀಲಕುಮಾರ ತಂದೆಃ ಅಣ್ಣೆಪ್ಪ
ಪ್ರಾ.ಸಾ.4ಃ ಬಸವರಾಜ ತಂದೆಃ ಮಾಣಿಕಪ್ಪ
ಪ್ರಾ.ಸಾ.5ಃ ಚೆನ್ನವೀರಪ್ಪ ತಂದೆಃ ಮಹಾದೇವಪ್ಪ
ಪ್ರಾ.ಸಾ.6ಃ ಕೆ.ಎಂ.ಸತೀಶ ತಂದೆಃ ಮಂಜಾದ್ರಿಗೌಡ
ಪ್ರಾ.ಸಾ.7ಃ ಶಶಿಕಾಂತ ತಂದೆಃ ಚೆನ್ನಬಸಪ್ಪ
ಪ್ರಾ.ಸಾ.8ಃ ಆನಂದರಾವ ತಂದೆಃ ಶಿವರಾಮ

2) *ಅಭಿಯೋಜನೆ ಪರವಾಗಿ ನಿಶಾನಿಸಲ್ಪಟ್ಟ ದಸ್ತಾವೇಜುಗಳ ಯಾದಿಃ*

| | | |
|---|---|---|
| ನಿ.ಪಿ.1 | ಃ | ಪಿರ್ಯಾದಿ |
| ನಿ.ಪಿ.1(ಎ) | ಃ | ಪ್ರಾಸಾ-1 ರವರ ಹಸ್ತಾಕ್ಷರ |
| ನಿ.ಪಿ.1(ಬಿ ಮತ್ತು ಸಿ) | ಃ | ಪ್ರಾಸಾ-8 ರವರ ಹಸ್ತಾಕ್ಷರ |
| ನಿ.ಪಿ.2 | ಃ | ಶವ ಪಂಚನಾಮೆ |
| ನಿ.ಪಿ.2(ಎ) | ಃ | ಪ್ರಾಸಾ-2 ರವರ ಹಸ್ತಾಕ್ಷರ |
| ನಿ.ಪಿ.2(ಬಿ) | ಃ | ಪ್ರಾಸಾ-6 ರವರ ಹಸ್ತಾಕ್ಷರ |
| ನಿ.ಪಿ.3 | ಃ | ಜಪ್ತಿ ಪಂಚನಾಮೆ |
| ನಿ.ಪಿ.3(ಎ) | ಃ | ಪ್ರಾಸಾ-2 ರವರ ಹಸ್ತಾಕ್ಷರ |
| ನಿ.ಪಿ.3(ಬಿ) | ಃ | ಪ್ರಾಸಾ-6 ರವರ ಹಸ್ತಾಕ್ಷರ |
| ನಿ.ಪಿ.4 ಮತ್ತು 5 | ಃ | ಟಂಟಂ ವಾಹನದ ಭಾವಚಿತ್ರಗಳು |
| ನಿ.ಪಿ.6 | ಃ | ಶವಪರೀಕ್ಷಾ ವರದಿ |
| ನಿ.ಪಿ.6(ಎ) | ಃ | ಪ್ರಾಸಾ-6 ರವರ ಹಸ್ತಾಕ್ಷರ |
| ನಿ.ಪಿ.7 | ಃ | ಕಚ್ಚಾ ನಕಾಶೆ |
| ನಿ.ಪಿ.7(ಎ) | ಃ | ಪ್ರಾಸಾ-6 ರವರ ಹಸ್ತಾಕ್ಷರ |
| ನಿ.ಪಿ.8 | ಃ | ವಾಹನ ಬಿಡುಗಡೆಯ ಕರಾರುಪತ್ರ |
| ನಿ.ಪಿ.8(ಎ) | ಃ | ಪ್ರಾಸಾ-6ರವರ ಹಸ್ತಾಕ್ಷರ |
| ನಿ.ಪಿ.9 | ಃ | ವಾಹನ ಪರೀಕ್ಷಾ ವರದಿ |
| ನಿ.ಪಿ.9(ಎ) | ಃ | ಪ್ರಾಸಾ-6 ರವರ ಹಸ್ತಾಕ್ಷರ |
| ನಿ.ಪಿ.9(ಬಿ) | ಃ | ಪ್ರಾಸಾ-7 ರವರ ಹಸ್ತಾಕ್ಷರ |
| ನಿ.ಪಿ.10 | ಃ | ಪ್ರಥಮ ವರ್ತಮಾನ ವರದಿ |
| ನಿ.ಪಿ.10(ಎ) | ಃ | ಪ್ರಾಸಾ-8 ರವರ ಹಸ್ತಾಕ್ಷರ |

3) ಆರೋಪಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಯಾದಿಃ

- ಇಲ್ಲ –

4) ಆರೋಪಿ ಪರ ನಿಶಾನಿಸಲ್ಪಟ್ಟ ದಸ್ತಾವೇಜುಗಳ ಯಾದಿಃ

ನಿಡಿ-1ಃ **ಪ್ರಾಸಾ-5 ರವರ ಹೇಳಿಕೆಯ ಭಾಗ.**

5) ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ಮುದ್ದೆ ಮಾಲುಗಳ ಯಾದಿಃ

**-ಇಲ್ಲ-**

**(ಸೌಭಾಗ್ಯ ಭೂಸೇರ)**

*5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು*

*ಜೆ.ಎಂ.ಎಫ್.ಸಿ. ಕಲಬುರಗಿ*

ಆದೇಶವನ್ನು ತೆರೆದ  ನ್ಯಾಯಾಲಯದಲ್ಲಿ ಘೋಷಿಸಲಾಯಿತು( ಆದೇಶವು ಪ್ರತ್ಯೇಕ ಪುಟದಲ್ಲಿದೆ)

ಆಜ್ಞೆ

ದಂ.ಪ್ರ. ಸಂ. ಕಲಂ.255(1) ರ ಮೇರೆಗೆ ವರ್ತಿಸುತ್ತಾ ಆರೋಪಿತನನ್ನು ಭಾರತ ದಂಡ ಸಂಹಿತೆ ಕಲಂಃ 279 ಮತ್ತು 304(ಎ) ಮತ್ತು ಕಲಂಃ187 ಐಎಂವಿ ಆ್ಯಕ್ಟ ರಡಿಯಲ್ಲಿ ಶಿಕ್ಷಿಸಲ್ಪಡುವಂತಹ ಆರೋಪಗಳಿಂದ ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತನ ಜಾಮೀನು ಮುಚ್ಚಳಿಕೆಯನ್ನು ಅಪೀಲ ಅವಧಿ ಮುಗಿದ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.

ಈ ಪ್ರಕರಣದಲ್ಲಿ ಜಪ್ತಿ ಮಾಡಲಾದ ವಾಹನ ನಂ. ಕೆಎ-32-ಆರ್-2901 ನೇದ್ದನ್ನು ಅಪೀಲ ಅವಧಿ ಮುಗಿದ ನಂತರ ಹರಾಜು ಮಾಡಿ ಬಂದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಲು ಆದೇಶಿಸಲಾಗಿದೆ.

5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಕಲಬುರಗಿ